ುಪನ್ಯಾಸ
ಂಥಮಾಲಿ

೧೧೭

ಗಳಗನಾಥರ ಕಾದಂಬರಿಗಳು

ಕೃಷ್ಣಮೂರ್ತಿ ಕಿತ್ತೂರ

ಅರಿವೇ ಗುರು

ರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ಜನವರಿ, ೧೯೭೧

ಉಪನ್ಯಾಸ ಗ್ರಂಥಮಾಲೆ

೧೧೭

ಗಳಗನಾಥರ ಕಾದಂಬರಿಗಳು

ಕೃಷ್ಣಮೂರ್ತಿ ಕಿತ್ತೂರ

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

೧೯೭೧

ಪ್ರಕಾಶಕರು :

ಎಸ್. ಎಸ್, ಒಡೆಯರ, ಎಂ. ಎ., ಎಲ್ಎಲ್. ಬಿ.

ರಜಿಸ್ಟ್ರಾರ್,

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ಜನೆವರಿ, ೧೯೭೧,
ಪ್ರತಿಗಳು : ೫,೦೦೦

ಬೆಲೆ :
೨೫ ಪೈಸೆ

ಮುದ್ರಕರು :

ಚ. ತಿ. ತಡಕೋಡ

ಶ್ರೀ ಶಾರದಾ ಪ್ರಿಂಟಿಂಗ ಪ್ರೆಸ್, ಧಾರವಾಡ– ೧

ಮುನ್ನುಡಿ

ನಮ್ಮ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗವು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ತಿಂಗಳು ಏರ್ಪಡಿಸುತ್ತಿರುವ ಉಪನ್ಯಾಸ ಶಿಬಿರಗಳು ದಿನೇ ದಿನೇ ಜನಪ್ರಿಯವಾಗುತ್ತ ಸಾಗಿರುವುದು ನಿಜವಾಗಿಯೂ ಸಂತೋಷದ ಸಂಗತಿ. ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವ ವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕವೊದಗುವದಲ್ಲದೆ ಎಂಥ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭವಾದ ಶೈಲಿಯಲ್ಲಿ ಬರೆವಣಿಗೆಯಲ್ಲಿ ಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೆ ೧೧೬ ಪುಸ್ತಕಗಳು ಪ್ರಕಟವಾಗಿವೆ. ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ಮೂರು-ನಾಲ್ಕು ಮುದ್ರಣಗಳನ್ನೂ ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯ ಧನಸಹಾಯ ಆಯೋಗದವರು ಉಪನ್ಯಾಸ ಶಿಬಿರಗಳಿಗೂ, ಈ ಪುಸ್ತಿಕೆಗಳ ಪ್ರಕಟನೆಗೂ ನೆರವು ನಿಡುತ್ತಿದ್ದು ಅವರಿಗೆ ವಿಶ್ವವಿದ್ಯಾಲಯವು ತನ್ನ ಕೃತಜ್ಞತೆಗಳನ್ನು ಸೂಚಿಸುತ್ತದೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖವಾದ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೨೬-೧-೧೯೭೧

ಎ. ಎಸ್. ಅಡಕೆ
ಕುಲಪತಿ

ಅ ರಿ ಕೆ

ಕರ್ನಾಟಕ ವಿಶ್ವವಿದ್ಯಾಲಯವು ವಿಜಾಪುರ ಜಿಲ್ಲೆಯ ಕೆರೂರಿನಲ್ಲಿ ಏರ್ಪಡಿಸಿದ ಉಪನ್ಯಾಸ ಶಿಬಿರದಲ್ಲಿ ದಿನಾಂಕ ೧೯-೧೨-೧೯೬೯ ರಂದು ನಾನು ಗಳಗನಾಥರ ಕಾದಂಬರಿಗಳನ್ನು ಕುರಿತು ಮಾತನಾಡಿದೆನು. ಗಳಗನಾಥರು ಕನ್ನಡದ ಆರಂಭದ ಕಾದಂಬರಿಕಾರರಲ್ಲಿ ಅಗ್ರಗಣ್ಯರು. ೧೯೬೯ ನೆಯ ವರುಷವು ಅವರ ಜನ್ಮಶತ ಸಂವತ್ಸರವೂ ಆಹುದು. ಆ ದೃಷ್ಟಿಯಿಂದ ವಿಶ್ವವಿದ್ಯಾಲಯದವರು ಗಳಗನಾಥರ ಬಗ್ಗೆ ಭಾಷಣವನ್ನೇರ್ಪಡಿಸಿದುದು ಔಚಿತ್ಯಪೂರ್ಣವಾಗಿತ್ತು. ಅಂದು ನಾನು ಮಾಡಿದ ಭಾಷಣವನ್ನೇ ತುಸು ವಿಸ್ತರಿಸಿ ಇಲ್ಲಿ ಬರೆದಿರುವೆನು.


ಆಗ ನನ್ನನ್ನು ಭಾಷಣಕ್ಕೆ ಆಮಂತ್ರಿಸಿ, ಈಗ ಇದನ್ನು ಪುಸ್ತಕರೂಪವಾಗಿ ಬರೆಯಿಸಿ ಪ್ರಕಟಿಸುತ್ತಿರುವ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ನಾನು ಋಣಿಯಾಗಿರುವೆನು. ಈ ಸಂದರ್ಭದಲ್ಲಿ ನನ್ನ ಸ್ನೇಹಿತರೂ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಮತ್ತು ಪ್ರಕಟನ ವಿಭಾಗದ ನಿರ್ದೇಶಕರೂ ಆದ ಶ್ರೀ ಚನ್ನವೀರ ಕಣವಿ ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಗುರುಗಳೂ ಕರ್ನಾಟಕ ವಿಶ್ವವಿದ್ಯಾಲಯದ ಕಲಬುರ್ಗಿಯ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದ ಮುಖ್ಯ ಪ್ರಾಧ್ಯಾಪಕರೂ ಆದ ಡಾ|| ಎಂ. ಎಸ್. ಸುಂಕಾಪುರ ಅವರು ಹಸ್ತಪ್ರತಿಯನ್ನು ಓದಿ ಸಲಹೆಗಳನ್ನಿತ್ತು ಪ್ರೋತ್ಸಾಹಿಸಿರುವರು. ಅವರಿಗೆ ನನ್ನ ಹೃತ್ಪೂರ್ವಕ ಪ್ರಣಾಮಗಳು.

ಕರ್ನಾಟಕ ವಿಶ್ವವಿದ್ಯಾಲಯ
ಸ್ನಾತಕೋತ್ತರ ಕೇಂದ್ರ,
ಕಲಬುರ್ಗಿ
೧೮–೧೨–೧೯೭೦

ಕೃಷ್ಣಮೂರ್ತಿ ಕಿತ್ತೂರ

ಪರಿವಿಡಿ



ಗಳಗನಾಥರು

೫—೧—೧೮೬೯ ೨೨—೪—೧೯೪೨

೧. ಗಳಗನಾಥರು

"ಕಾದಂಬರಿಗಳೆಂದರೆ ಗಳಗನಾಥರ ಕಾದಂಬರಿಗಳು"– ಎನ್ನುತ್ತಿದ್ದ ಒಂದು ಕಾಲವೂ ನಮ್ಮ ಕನ್ನಡ ಸಾಹಿತ್ಯದಲ್ಲಿ ಇದ್ದಿತು. ಗಳಗನಾಥ ಎಂಬುದು ನಿಜವಾಗಿ ಒಂದು ಊರಿನ ಹೆಸರು. ಆದರೆ 'ಗಳಗನಾಥ' ಎಂಬ ಹೆಸರಿನಿಂದಲೇ ಹೆಸರಾದ ವ್ಯಕ್ತಿ ಅದೇ ಊರಿನ ವೆಂಕಟೇಶ ತಿರಕೋ (ತ್ರಿವಿಕ್ರಮ) ಕುಲಕರ್ಣಿ ಎಂಬವರು. ಗಳಗನಾಥ ಊರು ಧಾರವಾಡ ಜಿಲ್ಲೆಯ ಹಾವೇರಿ ತಾಲೂಕಿನಲ್ಲಿ ಒಂದು ಸಣ್ಣ ಹಳ್ಳಿ. ಆ ಹಳ್ಳಿಯ ಹೆಸರು ಇಂದು ಇಷ್ಟು ಪ್ರಸಿದ್ಧವಾಗಲಿಕ್ಕೆ ಕಾದಂಬರಿಕಾರ ಗಳಗನಾಥರೇ ಕಾರಣರು.

ಗಳಗನಾಥರು ಅವರ ತಾಯಿಯ ತವರೂರಾದ ಹಾವನೂರಿನಲ್ಲಿ ದಿನಾಂಕ ೫-೧-೧೮೬೯ ರಂದು ಜನಿಸಿದರು. ಅವರ ಬಾಲ್ಯ ಹಾವನೂರು ಹಾಗು ಗಳಗನಾಥ ಗ್ರಾಮಗಳಲ್ಲಿ ಕಳೆಯಿತು. ಮುಲ್ಕೀ ಪರೀಕ್ಷೆಗೆ ಕಟ್ಟಿದಾಗಲೇ ಅವರು ಹಾವೇರಿಯನ್ನು ಕಂಡದ್ದು. ಆ ಪರೀಕ್ಷೆಯಲ್ಲಿ ಹೆಚ್ಚಿನ ಗುಣಗಳನ್ನು ಪಡೆದು ಪಾಸಾಗಿ ಅವರು ಧಾರವಾಡದಲ್ಲಿಯ ಕನ್ನಡ ಶಿಕ್ಷಕರ ಟ್ರೇನಿಂಗ ಕಾಲೇಜನ್ನು ಸೇರಿದರು. ಕಿತ್ತೂರ ಅಯ್ಯನವರು, ಮುಳಬಾಗಿಲ ಪಂಡಿತರು, ರೊದ್ದ ಶ್ರೀನಿವಾಸರಾಯರು ಮತ್ತು

ಕರಂದೀಕರ ರಾವಜೀರಾಯರು ಮೊದಲಾದ ವಿದ್ವಾಂಸರು ಅವರಿಗೆ ಗುರುಗಳಾಗಿದ್ದರು ಗಳಗನಾಥರು ಮೂರು ವರ್ಷ ಕಾಲ ಇಂತಹ ವಿದ್ವನ್ಮಣಿಗಳ, ಸದ್ಗುಣಿಗಳ ಕೈಯಲ್ಲಿ ಪರಿಣತರಾಗಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ವೆಂಕಣ್ಣ ಮಾಸ್ತರರಾಗಿ ಹೊರಬಿದ್ದರು.

ಧಾರವಾಡ ಜಿಲ್ಲೆಯ ಶಿರಗುಪ್ಪಿ, ನರೇಂದ್ರ, ಉಪ್ಪಿನಬೆಟಗೇರಿ, ಬಂಕಾಪುರ, ಮುಂಡರಗಿ, ಗುತ್ತಲ ಮೊದಲಾದ ಗ್ರಾಮಗಳಲ್ಲಿ ಕನ್ನಡ ಪ್ರಾಥಮಿಕ ಶಾಲೆಯ ಮುಖ್ಯಾಧ್ಯಾಪಕರೆಂದು ಕೆಲಸಮಾಡಿದ ಗಳಗನಾಥರು ಮುಂದೆ ತಾವು ಕಲಿತ ಟ್ರೇನಿಂಗ ಕಾಲೇಜಿನಲ್ಲಿಯೇ ಪ್ರಾಧ್ಯಾಪಕರೂ ಆದರು. ಶಿಕ್ಷಕ ಜೀವನದಲ್ಲಿ ಅವರು ಆದರ್ಶ ಶಿಕ್ಷಕರೆಂದು ಹೆಸರು ಪಡೆದರು.

"ನಾನು ಟ್ರೇನಿಂಗ ಕಾಲೇಜದಿಂದ ಹೊರಬಿದ್ದ ಬಳಿಕ ಹಳ್ಳಿಯ ಶಾಲೆಯ ಮಾಸ್ತರನಾಗಿ ಏಕನಿಷ್ಠೆಯಿಂದ ದುಡಿಯ ತೊಡಗಿದೆನು. ಕೆಲಸದಲ್ಲಿ ನನಗೆ ಪ್ರೀತಿ ಹೆಚ್ಚು. ನನ್ನಷ್ಟಕ್ಕೆ ನಾನಿರುವಲ್ಲಿ ನನ್ನ ಆಸಕ್ತಿ ಬಹಳ. ಕೆಲಸ ಬಿಟ್ಟು ಸಿಕ್ಕಾಗ ಸಿಕ್ಕತ್ತ ಸುಮ್ಮನೆ ಎಡತಾಕುವ ಚಾಳಿಯಂತೂ ನನಗೆ ಗೊತ್ತೇ ಇಲ್ಲ. ನಾನಾಯಿತು, ನನ್ನ ಕೆಲಸವಾಯಿತು ಎಂಬ ಚಂದದಿಂದ ನಡೆಯುವ ಮನುಷ್ಯನು ನಾನು........ಒಟ್ಟಿಗೆ ನಾನು ನನ್ನ ಜೀವನಾಧಾರವಾದ ಶಿಕ್ಷಣದ ಕೆಲಸವನ್ನು ನಿರ್ವಂಚನೆಯಿಂದ ಮನಸ್ಸಿಗೆ ಹಚ್ಚಿಕೊಂಡು ಮಾಡುತ್ತ....ಕಾಲಹರಣ ಮಾಡ ತೊಡಗಿದೆನು." ಎಂದು ಅವರೇ ಹೇಳಿರುವುದು ಗಮನಾರ್ಹವಾಗಿದೆ.

ಗಳಗನಾಥರು ಶಿಕ್ಷಕ ವೃತ್ತಿಯಲ್ಲಿ ಪರಿಣತರೂ, ಶಿಕ್ಷಣದಲ್ಲಿ ಅತ್ಯಂತ ಆಸ್ಥೆಯುಳ್ಳವರೂ ಆಗಿದ್ದರು. ಅವರು ತಮ್ಮ ಕರ್ತವ್ಯವನ್ನು ಅತಿ ಪ್ರಾಮಾಣಿಕತೆಯಿಂದಲೂ ನಿರ್ವಂಚನೆಯಿಂದಲೂ ಮಾಡುತ್ತಿದ್ದರೆಂಬುದು ಅಕ್ಷರಶಃ ನಿಜ. ಆದುದರಿಂದಲೇ ಅವರು ಕಲಿಸುತ್ತಿದ್ದ ಶಾಲೆಗಳೆಲ್ಲ ಮಾದರಿ ಶಾಲೆಗಳಾಗಿ ಮಾರ್ಪಡುತ್ತಿದ್ದುವು. ಅವರ ಶಾಲೆಗಳಿಗೆ ಭೆಟ್ಟಿಕೊಟ್ಟ ಹಿರಿಯ ಅಧಿಕಾರಿಗಳೂ ಇತರ ಪ್ರಮುಖರೂ ಅವರ ಸೇವೆಯನ್ನು ಬಾಯಿತುಂಬ ಹೊಗಳುತ್ತಿದ್ದರು. ಗುತ್ತಲ ಶಾಲೆಯಲ್ಲಿ ಇಂದಿಗೂ ಲಭ್ಯವಿರುವ ಶಾಲೆಯ 'ಭೆಟ್ಟಿಯ ಪುಸ್ತಕ'ವು (Visit Book) ಈ ಮಾತಿಗೆ ಬೇಕಾದಷ್ಟು ಸಾಕ್ಷಿಯನ್ನು ಒದಗಿಸುತ್ತದೆ.

ಶಾಲೆಯ ಕಮೀಟಿಗೆ ೨೫ ವರ್ಷಗಳಿಂದ ಮೆಂಬರರಾಗಿದ್ದ ಗೃಹಸ್ಥರೊಬ್ಬರು ಗಳಗನಾಥರು ತಮ್ಮ ಊರ ಶಾಲೆಯ ಹೆಡ್‌ಮಾಸ್ತರರಾಗಿ ಬಂದ ನಂತರ ಅದು ತುಂಬ ಸುಧಾರಿಸಿತೆಂದು ಬರೆದಿರುವರು. ಅಲ್ಲದೆ—

"The School has progressed marvelously both in number and efficiency. Full credit should be given to the Headmaster."

" Very few Schools in this district can boast of such all round efficiency as is noticiable in the case of this School,"

"The Headmaster seems to take the utmost interest in the School teaching. His spirit has also been infused in the teachers as well as the boys."

ಇಂಥ ಹಲವಾರು ಮೆಚ್ಚಿಕೆಯ ಮಾತುಗಳನ್ನು ಮೇಲಧಿಕಾರಿಗಳು ಗಳಗನಾಥರ ಬಗ್ಗೆ ಬರೆದಿರುವರು.

ಗಳಗನಾಥರು ಶಾಲೆಗೂ ಗುತ್ತಲ ಗ್ರಾಮದವರಿಗೂ ಉಪಯೋಗವಾಗುವಂತಹ ಒಂದು ಬಾವಿಯನ್ನು ಅಲ್ಲಿ ಕಟ್ಟಿಸಿದರೆಂಬುದು ಮೆಚ್ಚುವಂತಹದೇ. ಒಟ್ಟಿನಲ್ಲಿ ಅವರು ತಮ್ಮ ಸಂಪರ್ಕದಲ್ಲಿ ಬಂದವರನ್ನೆಲ್ಲ ತಮ್ಮ ಶಿಸ್ತು ಮತ್ತು ಆದರ್ಶಗಳ ಕಡೆಗೆ ಕರೆದೊಯ್ಯುತ್ತಿದ್ದರು.

ಗಳಗನಾಥರು ಆದರ್ಶ ಶಿಕ್ಷಕರಾಗಿದ್ದರಲ್ಲದೆ ಒಳ್ಳೆಯ ಲೇಖಕರೂ ಆದರು. ಮೊದಮೊದಲು ಶಿಕ್ಷಣಕ್ಷೇತ್ರಕ್ಕೆ ಸಂಬಂಧಿಸಿದ 'ಲಘು ನಿಬಂಧ ಸಂಗ್ರಹ', 'ಉತ್ತರ ರಾಮಚರಿತ್ರ ಸಾರ', 'ಸುಂದರ ಲೇಖ ಸಮುಚ್ಚಯ', 'ಪ್ರಬಂಧ ಶಿಕ್ಷಣ' ಮೊದಲಾದ ಚಿಕ್ಕ ಪುಟ್ಟ ಗ್ರಂಥಗಳನ್ನು ಬರೆದು ಲೇಖಕರೆನಿಸಿಕೊಂಡರು.

ಅವರಲ್ಲಿ ಹುದುಗಿದ್ದ ಸಾಹಿತ್ಯಶಕ್ತಿಯು ಮುಂದೆ ಕಾದಂಬರಿ ರೂಪದಿಂದ ಪ್ರಕಟವಾಯಿತು. ಅದಕ್ಕೆ ಧಾರವಾಡದ 'ಕರ್ನಾಟಕ ವಿದ್ಯಾವರ್ಧಕ ಸಂಘ' ವೇ ಮುಖ್ಯ ಪ್ರೇರಣೆ

ಯನ್ನು ನೀಡಿತೆಂದು ಹೇಳಬೇಕು. ಆ ಸಂಘದವರು ಸಾಹಿತ್ಯ ನಿರ್ಮಿತಿಗೆ ಪ್ರೋತ್ಸಾಹವನ್ನು ಕೊಡುವ ಉದ್ದೇಶದಿಂದ ಪ್ರತಿ ವರ್ಷ ಸಾಹಿತ್ಯಸ್ಪರ್ಧೆಗಳನ್ನು ಏರ್ಪಡಿಸುತ್ತಿದ್ದರು. ಆಗ ಧಾರವಾಡದ ಸಮೀಪದ ಗ್ರಾಮವಾದ ನರೇಂದ್ರದಲ್ಲಿ ಶಿಕ್ಷಕರಾಗಿದ್ದ ಗಳಗನಾಥರು ಇವರಿಂದ ಆಕರ್ಷಿತರಾಗಿ, ತಮ್ಮ ಪ್ರಥಮ ಕಾದಂಬರಿ "ಪ್ರಬುದ್ಧ ಪದ್ಮನಯನೆ"ಯನ್ನು ಬರೆದು ಸ್ಪರ್ಧೆಗೆ ಕಳಿಸಿದರು. ಸಂಘದವರು ಅದನ್ನು ಮೆಚ್ಚಿಕೊಂಡು ಪ್ರಥಮ ಬಹುಮಾನದ ಪುರಸ್ಕಾರವನ್ನು ನೀಡಿದರು. ಇದರಿಂದ ಗಳಗನಾಥರ ಲೆಕ್ಕಣಿಕೆ ಉತ್ಸಾಹ ಪಡೆಯಿತು; ಅವರ ಪ್ರತಿಭೆಗೆ ಹೊಳಪು ಮೂಡಿತು!

ನಂತರ ಒಂದು ವರ್ಷವೂ ತಪ್ಪದೆ ೯-೧೦ ವರ್ಷ ಲೇಖನ-ಭಾಷಣಗಳ ಸ್ಪರ್ಧೆಯಲ್ಲಿ ಗಳಗನಾಥರು ಉಚಿತಗಳನ್ನು ಪಡೆದದ್ದರಿಂದ ಅವರಿಗೆ "ಪಂಢರಪುರದ ವಾರಕರಿ" ಎಂದು ಆ ಸಂಘದವರು ವಿನೋದದಿಂದ ಅನ್ನುತ್ತಿದ್ದರಂತೆ! ಹೀಗೆ ವೆಂಕಣ್ಣ ಮಾಸ್ತರರು ಕಾದಂಬರಿಕಾರ ಗಳಗನಾಥರಾದರು.

ಧಾರವಾಡದ ಟ್ರೇನಿಂಗ ಕಾಲೇಜದಲ್ಲಿ ಓದುತ್ತಿರುವಾಗಲೇ ಗಳಗನಾಥರು ಮರಾಠಿ "ಕೇಸರಿ" ಮತ್ತು "ಕರಮಣೂಕ" ಮುಂತಾದ ಪತ್ರಿಕೆಗಳಿಂದ ಪ್ರಭಾವಿತರಾಗಿದ್ದರು. "ಕೇಸರಿ"ಯಲ್ಲಿ ಪ್ರಕಟವಾಗುತ್ತಿದ್ದ ರಾಜಕೀಯ ಲೇಖನಗಳು

ಅವರ ವಿಚಾರಶಕ್ತಿಯನ್ನು ಪ್ರಚೋದಿಸಿ ಅವರನ್ನು ದೇಶಪ್ರೇಮಿ
ಗಳನ್ನಾಗಿ ಮಾಡಿದುವು. "ಕರಮಣೂಕ"ದಲ್ಲಿ ಪ್ರಕಟವಾಗು
ತ್ತಿದ್ದ ಹರಿ ನಾರಾಯಣ ಆಪಟೆಯವರ ಧಾರಾವಾಹಿ ಕಾದಂಬರಿ
ಗಳು ಅವರಲ್ಲಿ ಸಾಹಿತ್ಯಾಭಿರುಚಿಯನ್ನೂ, ಬರೆಯಬೇಕೆಂಬ ಹಂಬ
ಲವನ್ನೂ ಉಂಟು ಮಾಡಿದ್ದುವು. ಆಗ ಕನ್ನಡ ಜನರೆಲ್ಲ ಈ
ಪತ್ರಿಕೆಗಳನ್ನು ಹೆಚ್ಚಾಗಿ ಓದುತ್ತಿದ್ದರು. ಮರಾಠಿಯನ್ನು
ಅರಿಯದ ಕನ್ನಡ ವಾಚಕರಿಗೆ ಅವುಗಳ ಸವಿಯನ್ನು ನೀಡ
ಬೇಕೆಂದು ಆಗಲೇ ಗಳಗನಾಥರ ಮನಸ್ಸು ತವಕಿಸುತ್ತಿತ್ತು.

ಆದರೆ ಅದು ಸಾಧ್ಯವಾದುದು ಕೆಲವು ವರ್ಷಗಳ
ನಂತರವೇ. ಗಳಗನಾಥರು ಗುತ್ತಲ ಶಾಲೆಯಲ್ಲಿ ಮುಖ್ಯಾ
ಧ್ಯಾಪಕರಾಗಿ ಕೆಲಸ ಮಾಡುತ್ತಿದ್ದ ಕಾಲದಲ್ಲಿ, ಅವರು
ಗುತ್ತಲಕ್ಕೆ ಸಮೀಪದಲ್ಲಿದ್ದ ಅಗಡಿಯ ಶ್ರೀ ಶೇಷಾಚಲ ಸ್ವಾಮಿ
ಗಳಿಂದ ಆಕರ್ಷಿತರಾದರು. ಮುಂದೆ ಸ್ವಾಮಿಗಳ ಪ್ರೇರಣೆ
ಯಿಂದ ಅವರು "ಸದ್ಬೋಧ ಚಂದ್ರಿಕೆ" ಎಂಬ ಮಾಸಪತ್ರಿಕೆ
ಯನ್ನು ೧೯೦೭ ರಲ್ಲಿ ಆರಂಭಿಸಿದರು. ಆ ಪತ್ರಿಕೆಯಲ್ಲಿ
ಹೆಚ್ಚಾಗಿ ಗಳಗನಾಥರ ಲೇಖನಗಳೂ, ಮತ್ತು ಅವರೇ ಬರೆದ
ಕಾದಂಬರಿಗಳೂ ಧಾರಾವಾಹಿಯಾಗಿ ಪ್ರಕಟವಾಗುತ್ತಿದ್ದುವು.
ಗಳಗನಾಥರ ಶೈಲಿಯಿಂದ ಈ "ಸದ್ಬೋಧ ಚಂದ್ರಿಕೆ" ಬಹು
ಬೇಗನೇ ಜನಪ್ರಿಯವಾಯಿತು. ಈ ಶತಮಾನದ ಆರಂಭದ
ದಶಕಗಳಲ್ಲಿಯೇ ಆ ಪತ್ರಿಕೆಯ ಏಳು ಸಾವಿರ ಪ್ರತಿಗಳು
ಮಾರಾಟವಾಗುತ್ತಿದುವೆಂಬುದು ಆಶ್ಚರ್ಯಕರವೇ ಸರಿ. ಚಂದಾ

ದಾರರು “ ಸದ್ಬೋಧ ಚಂದ್ರಿಕೆ ”ಯ ದಾರಿಯನ್ನು ದಿನಾಲು ಕಾಯುತ್ತಿದ್ದರೆಂಬುದು ಅಕ್ಷರಶಃ ಸತ್ಯವಾಗಿತ್ತು. “ಚಂದ್ರಿಕೆ” ಯ ಪ್ರತಿಗಳನ್ನು ಹಾವೇರಿಯಲ್ಲಿ ಅಂಚೆಗೆ ಹಾಕುವುದಕ್ಕಾಗಿ ಚಕ್ಕಡಿಯಲ್ಲಿ ತುಂಬಿಕೊಂಡು ಹೋಗುತ್ತಿದ್ದರಂತೆ !

“ ನನ್ನಂತಹ ೧೩–೧೪ ವಯಸ್ಸಿನ ಎಳೆಯನಿಗೂ ಅರ್ಥ ವಾಗುವಂತಹ ಶೈಲಿ ಶ್ರೀ ಗಳಗನಾಥರದಾಗಿತ್ತು. ಸದ್ಬೋಧ ಚಂದ್ರಿಕೆ ಎಂಬ ಮಾಸಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬರು ತ್ತಿದ್ದವು ಶ್ರೀ ಗಳಗನಾಥರ ಕಾದಂಬರಿಗಳು. ನಾವು ಪ್ರತಿ ತಿಂಗಳ ಮೊದಲ ತಾರೀಖನ್ನು ಚಾತಕ ಪಕ್ಷಿಯಂತೆ ಎದುರು ನೋಡುತ್ತಿದ್ದೆವು. ತಿಂಗಳ ಮೊದಲ ತಾರೀಕಿನ ದಿನ ಅಂಚೆ ಯವನು ನೇಟಿವ್ ಜನರಲ್ ಲೈಬ್ರರಿಗೆ ಬರುವ ವೇಳೆಗೆ ಧಾವಿ ಸುತ್ತಿದ್ದೆವು. ಅನೇಕ ಸಲ ಆ ಸಂಚಿಕೆಯನ್ನು ಮೊದಲು ನಮಗೆ ಒಪ್ಪಿಸಬೇಕೆಂದು ವಾಚನಾಲಯದ ಕಾರ್ಯದರ್ಶಿ ಯನ್ನು ಒಲಿಸಲು ನಾವು ಅವನಿಗೆ ಚಹದ ಲಂಚವನ್ನು ಕೊಡುತ್ತಿದ್ದೆವು. ” ಎಂದು ಸುಪ್ರಸಿದ್ಧ ಹಿರಿಯ ಸಾಹಿತಿಗಳಾದ ಶ್ರೀರಂಗರು ಹೇಳುತ್ತಾರೆ.

“ಸದ್ಬೋಧ ಚಂದ್ರಿಕೆ” ಗಳಗನಾಥರಿಗೆ ಬಹು ಆತ್ಮೀಯ ವಾಗಿತ್ತು. “ನನ್ನ ಅಕ್ಷರೆಯ ಸದ್ಬೋಧ ಚಂದ್ರಿಕೆ ಎಂಬ ಮಾಸಪತ್ರಿಕೆಯು ಸದ್ಗುರುನಾಥನ ಕೃಪೆಯಿಂದ ನನ್ನ ಜ್ಯೇಷ್ಠ ಪುತ್ರಿಯಂತೆ ಆನಂದವನದಲ್ಲಿ* ಹುಟ್ಟಿದಳು.” ಎಂದು ಸ್ವತಃ

* ಆಗಡಿಯ ಶ್ರೀ ಶೇಷಾಚಲ ಸ್ವಾಮಿಗಳ ಆಶ್ರಮ

ಗಳಗನಾಥರು ಹೆಮ್ಮೆಯಿಂದ ಹೇಳುತ್ತಿದ್ದರು. ಗಳಗನಾಥರು ಸದ್ಬೋಧ ಚಂದ್ರಿಕೆಗೆ ಜನ್ಮವಿತ್ತರೆ, ಅವಳು ಕಾದಂಬರಿಕಾರ ಗಳಗನಾಥರನ್ನು ಕನ್ನಡ ನಾಡಿನ ಎಲ್ಲ ದಿಕ್ಕುಗಳಲ್ಲೂ ಬೆಳಗಿಸಿದಳು !

ಕೆಲ ಕಾಲದ ನಂತರ ಗಳಗನಾಥರು ತಮ್ಮ ಶಿಕ್ಷಕ ವೃತ್ತಿಗೆ ರಾಜೀನಾಮೆಯನ್ನಿತ್ತು ಅಗಡಿಯಲ್ಲಿಯೇ ನೆಲೆಸಿದರು. ಅಲ್ಲಿ ಅವರು "ಸದ್ಬೋಧ ಚಂದ್ರಿಕೆ"ಯ ಕೆಲಸದ ಜೊತೆಗೆ ವೈದಿಕ ಪಾಠಶಾಲೆಯನ್ನೂ ಗೋಶಾಲೆಯನ್ನೂ ಆರಂಭಿಸಿದರು. ಆದರೆ ಶೇಷಾಚಲ ಸ್ವಾಮಿಗಳು ಕಾಲವಾದ ನಂತರ ಅವರು ಬಹುಕಾಲ ಅಗಡಿಯಲ್ಲಿ ನಿಲ್ಲಲಾಗಲಿಲ್ಲ. ೧೯೧೮ ರಲ್ಲಿ ಗಳಗನಾಥರು ಹಾವೇರಿಗೆ ಬಂದು ಅಲ್ಲಿ "ಸದ್ಗುರು" ಎಂಬ ಹೊಸ ಮಾಸಪತ್ರಿಕೆಯನ್ನು ಆರಂಭಿಸಿದರು. ಅಗಡಿಯಲ್ಲಿಯಂತೆ ಹಾವೇರಿಯಲ್ಲೂ ಕೂಡ ಪಾಠಶಾಲೆ ಮತ್ತು ಗೋಶಾಲೆಗಳನ್ನು ನಡೆಸತೊಡಗಿದರು. ಆದರೆ ಇವುಗಳನ್ನು ಬಹು ದಿವಸ ನಡೆಸುವುದು ಅವರಿಂದ ಸಾಧ್ಯವಾಗಲಿಲ್ಲ. ಹಣದ ಅಡಚಣೆಯಿಂದ ಅವುಗಳನ್ನು ನಿಲ್ಲಿಸಿ ಬಿಡಬೇಕಾಯಿತಷ್ಟೇ ಅಲ್ಲ; ತಮ್ಮ ತಲೆಯ ಮೇಲೆ ಸಾಲದ ಭಾರವನ್ನು ಹೊರಬೇಕಾಯಿತು.

ಈಗಾಗಲೇ ಅವರು ಒಳ್ಳೆಯ ಕಾದಂಬರಿಕಾರರೆಂದು ಕನ್ನಡ ನಾಡಿನ ತುಂಬೆಲ್ಲ ಹೆಸರು ಪಡೆದಿದ್ದರು. ಆದರೆ ಆಗಲೇ ಅಂದರೆ ಈ ಶತಕದ ಮೂರು ನಾಲ್ಕನೆಯ ದಶಕದಲ್ಲಿ

ಕನ್ನಡ ಸಾಹಿತ್ಯದಲ್ಲಿ ಹೊಸಗಾಳಿ ಬೀಸಲಾರಂಭಿಸಿತ್ತು. ಜನರಿಗೆ ಹೊಸ ಹೊಸ ಕಾದಂಬರಿಗಳು ಬೇಕಾಗಿದ್ದವು. ಗಳಗನಾಥರು ಮಾತ್ರ ಇನ್ನೂ ತಮ್ಮ ರೀತಿಯಲ್ಲಿಯೇ ಕಾದಂಬರಿಗಳನ್ನು ಬರೆಯುತ್ತಿದ್ದರು. ಆದರೂ, ಅವರ ಸಾಂಪ್ರದಾಯಕ ವಾಚಕರು ಇನ್ನೂ ಇದ್ದೇ ಇದ್ದರು. ಆದರೆ ಗಳಗನಾಥರು ಅವರನ್ನು ಹುಡುಕಿಕೊಂಡು ಹೋಗಬೇಕಾಯಿತು. ಅದಕ್ಕಾಗಿ ಅವರು ತಮ್ಮ "ಸಾಲ ತೀರಿಸುವ ಪುಸ್ತಕಗಳ" ಗಂಟನ್ನು ಹೆಗಲ ಮೇಲೆ ಹೊತ್ತುಕೊಂಡು ಊರೂರು ಅಲೆಯಬೇಕಾಯಿತು. ಈಗ ಅವರು ಕೇವಲ ಲೇಖಕರಾಗಿ ಉಳಿಯಲಿಲ್ಲ. ಲೇಖಕರೂ ಪ್ರಕಾಶಕರೂ ಜೊತೆಗೆ ಮಾರಾಟಗಾರರೂ ಆಗಬೇಕಾಯಿತು. ಅವರು ಹೋದಲ್ಲೆಲ್ಲ ಅವರಿಗೆ ಪ್ರೋತ್ಸಾಹ ಸಿಗುತ್ತಿತ್ತು. (ಕೆಲವು ಕಹಿ ಅನುಭವಗಳೂ ಬಾರದಿಲ್ಲ.) ಆದರೂ ಅವರ ಪುಸ್ತಕದ ಭಾರ ಹೆಚ್ಚಿತೇ ವಿನಾ ಅವರ ಸಾಲದ ಭಾರ ಕಡಿಮೆಯಾಗಲಿಲ್ಲ. ಕೊನೆಗೆ ೧೯೪೨ ರಲ್ಲಿ ಅವರು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕ್ಯಾನ್ಸರ ಬೇನೆಯಿಂದ ತೀರಿಕೊಂಡಾಗ, ಅವರಿನ್ನೂ ಸಾಲಗಾರರಾಗಿಯೇ ಇದ್ದರು!

ಹಾಗೆ ನೋಡಿದರೆ, ಕಾದಂಬರಿಗಳನ್ನು ಬರೆದು ಗಳಗನಾಥರು ಗಳಿಸಿದುದು ಕಡಿಮೆಯೇನೂ ಆಗಿರಲಿಲ್ಲ. ೮೦-೯೦ ಸಾವಿರ ರೂಪಾಯಿಗಳಷ್ಟು ಒಟ್ಟು ಗಳಿಕೆ ಅವರದಾಗಿತ್ತು. ಆದರೆ ಅವರ ವೆಚ್ಚವು ಇನ್ನೂ ಹೆಚ್ಚಾಗಿದ್ದಿತು. ಅವರ ಧಾರ್ಮಿಕ ಮನೋಭಾವವೇ ಅದಕ್ಕೆ ಮುಖ್ಯ ಕಾರಣ ಎನ್ನ

ಬೇಕು. ಅವರ ಕಾದಂಬರಿಗಳ ಮರಾಠಾ ಮತ್ತು ರಜಪೂತ ವೀರ ನಾಯಕರಂತೆ ಸ್ವತಃ ಗಳಗನಾಥರು "ಗೋಬ್ರಾಹ್ಮಣ ಪೂಜಕ"ರಾಗಿದ್ದರು. ತಮ್ಮ ವೈದಿಕ ಪಾಠಶಾಲೆಯ ವಿದ್ಯಾರ್ಥಿಗಳಿಗೆಲ್ಲ ಅವರು ಊಟ ವಸತಿ ಬಟ್ಟೆಗಳನ್ನು ಕೊಟ್ಟರು. ಶಾಲೆಯ ಸಂಸ್ಕೃತ ಪಂಡಿತರ ಸಂಸಾರಗಳ ಭಾರವನ್ನೂ ಅವರೇ ಹೊತ್ತರು. ದಾನ-ಧರ್ಮಗಳಲ್ಲಂತೂ ಅವರ ಕೈ ಯಾವಾಗಲೂ ದೊಡ್ಡದಾಗಿಯೇ ಇರುತ್ತಿತ್ತು. ರತ್ನಾಗಿರಿಯ ತಾಂಬೆ ಶಾಸ್ತ್ರಿಗಳೆಂಬವರು ಬಯಸಿದಾಗ, ಗಳಗನಾಥರು ತಮ್ಮ ಪ್ರೆಸ್ಸಿನ ಒಂದು ಭಾಗವನ್ನೇ ನಿರ್ವಂಚನೆಯಿಂದ ಕೊಟ್ಟುಬಿಟ್ಟರು. ತಮ್ಮ ಗೋಶಾಲೆಯ ಆಕಳುಗಳು ಆಸೆ ಪಟ್ಟವೆಂದು ತಿಳಿದಾಗ ಕಬ್ಬಿನ ತೋಟವನ್ನೇ ಕೊಂಡು ಅವುಗಳಿಗೆ ತಿನ್ನಿಸಿದರು! ಇಂಥ ನೂರಾರು ಉದಾಹರಣೆಗಳು ಅವರ ಮಾನವೀಯ, ಉದಾತ್ತ, ಉದಾರ ಚರಿತವನ್ನೇ ಎತ್ತಿ ಹೇಳುತ್ತವೆ. ಆದರೆ ಇಂಥಲ್ಲಿ ಅವರ ವ್ಯಾವಹಾರಿಕತೆ ಮಾತ್ರ ತಪ್ಪಿತು. ಅದಕ್ಕೆಂದೇ ಅವರು ಸಾಲಗಾರರಾಗಿಯೇ ಉಳಿಯಬೇಕಾಯಿತು.

ಗಳಗನಾಥರ ಜೀವನವನ್ನು ಅವಲೋಕಿಸುವಾಗ ಅವರ ಜೊತೆಗೆ ೧೮೬೯ ರಲ್ಲಿಯೇ ಜನಿಸಿದ ಇನ್ನೊಬ್ಬ ಕನ್ನಡ ಗಣ್ಯ ಸಾಹಿತಿ ನಂದಳಿಕೆ ಲಕ್ಷ್ಮೀನಾರಣಪ್ಪನವರ (ಮುದ್ದಣ) ನೆನಪೂ ಆಗದೆ ಇರಲಾರದು. ಅವರೂ ಕನ್ನಡ ಶಾಲೆಯ ಶಿಕ್ಷಕರೇ ಆಗಿದ್ದು ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚಿನ ಕೀರ್ತಿಯನ್ನು ಪಡೆದರು; ಆದರೂ ಸಾಲಗಾರರಾಗಿಯೇ ಮಡಿದರು. ಹಾಗೆ

ನೋಡಿದರೆ ನಂದಳಿಕೆಯುವರಿಗಿಂತ ಗಳಗನಾಥರೇ ಸುದೈವಿಗಳೆನ್ನಬೇಕು. ತಮ್ಮ ಜೀವಿನಕಾಲದಲ್ಲಿಯೇ ಅವರು ಬೇಕಾದಷ್ಟು ಗಳಿಸಿದರು, ಹಣವನ್ನೂ ಕೀರ್ತಿಯನ್ನೂ ! ಇಬ್ಬರೂ ಸೋತು ಗೆದ್ದವರೇ!

ಗಳಗನಾಥರು ಕನ್ನಡಿಗರಿಗೆ ಮುಖ್ಯವಾಗಿ ಕಾದಂಬರಿಕಾರರೆಂದೇ ಪರಿಚಿತರಾಗಿದ್ದರೂ, ಅವರು ಕಾದಂಬರಿಗಳನ್ನಲ್ಲದೆ ಇತರ ಸಾಹಿತ್ಯವನ್ನೂ ಸಾಕಷ್ಟು ರಚಿಸಿದರು. "ನಿರ್ವಾಣ ಮಹೋತ್ಸವ", "ಕುಲಕುಠಾರ" ಗಳಂಥ ಸತ್ಪುರುಷರ ಚರಿತ್ರೆಗಳನ್ನೂ; "ಗಿರಿಜಾ ಕಲ್ಯಾಣ" "ಉತ್ತರ ರಾಮ ಚರಿತ್ರದ ಕಥೆ" "ನಳ ಚರಿತ್ರೆ" "ತುಲಸೀ ರಾಮಾಯಣ", "ಭಾಗವತಾಮೃತ" ಮುಂತಾದ ಪೌರಾಣಿಕ ಗ್ರಂಥಗಳನ್ನೂ ರಚಿಸಿದರು. ಅಲ್ಲದೆ ಮಹಾಭಾರತದ ೧೮ ಪರ್ವಗಳ ಸಾರವನ್ನೂ ಬರೆದು ಕೃತಾರ್ಥರಾದರು.

ಅವರು ಬರೆದ ಶೈಕ್ಷಣಿಕ ಗ್ರಂಥಗಳೇ ಇರಲಿ, ಧಾರ್ಮಿಕ ಗ್ರಂಥಗಳೇ ಇರಲಿ, ಅಥವಾ ಕಾದಂಬರಿಗಳೇ ಇರಲಿ ಅವುಗಳಲ್ಲಿ ಅವರ ಧಾರ್ಮಿಕ ಮನೋಧರ್ಮ ಪ್ರಕಟವಾಗದೆ ಇಲ್ಲ. ಸನಾತನ ಹಿಂದೂಧರ್ಮಪ್ರೇಮವನ್ನೂ ರಾಷ್ಟ್ರಪ್ರೇಮವನ್ನೂ ಎತ್ತಿ ಹಿಡಿಯದ ಅವರ ಕಾದಂಬರಿಯೇ ಇಲ್ಲ ಎಂದರೆ ತಪ್ಪಾಗಲಾರದು.

ಕನ್ನಡಿಗರಲ್ಲಿ ಜಾಗೃತಿಯನ್ನೂ ಸಾಹಿತ್ಯಾಭಿರುಚಿಯನ್ನೂ ಉಂಟು ಮಾಡಲೆಂದೇ ಅವರು ಕಾದಂಬರಿಗಳನ್ನು ಬರೆದರು. ಕನ್ನಡಿಗರಲ್ಲಿ ಕನ್ನಡತನವನ್ನು ತುಂಬಿ ಅವರಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸಿದ ಶ್ರೇಯಸ್ಸು ಗಳಗನಾಥರದು. ಆ ರೀತಿಯಿಂದ ನೋಡಿದರೆ ಅವರು ಕನ್ನಡಕ್ಕೆ ಸಲ್ಲಿಸಿದ ಸೇವೆ ಅನುಪಮವಾಗಿದೆ.

೨. ಗಳಗನಾಥರ ಕಾದಂಬರಿಗಳು

"ಕನ್ನಡ ಕಾದಂಬರಿ ಪಿತಾಮಹ" ರೆಂದು ಖ್ಯಾತರಾದ ಗಳಗನಾಥರು ಈ ಶತಮಾನದ ಆರಂಭ ಕಾಲದಲ್ಲಿಯೇ ಇಪ್ಪತ್ತಕ್ಕೂ ಮಿಕ್ಕಿ ಕಾದಂಬರಿಗಳನ್ನು ಬರೆದರೆಂಬುದು ಸಣ್ಣ ಮಾತಲ್ಲ. ಅವರ ಕಾದಂಬರಿಗಳಲ್ಲಿ ಅನುವಾದ ಅಥವಾ ರೂಪಾಂತರಗಳೇ ಹೆಚ್ಚು. ಅವರು ಆ ಕಾಲಕ್ಕೆ ಮರಾಠಿ ಭಾಷೆಯ ಸುಪ್ರಸಿದ್ಧ ಕಾದಂಬರಿಕಾರರಾದ ಹರಿ ನಾರಾಯಣ ಆಪಟೆ ಅವರ ಕಾದಂಬರಿಗಳನ್ನೇ ಹೆಚ್ಚಾಗಿ ರೂಪಾಂತರಿಸಿದರು. ಆಪಟೆಯವರು ಉಜ್ವಲ ದೇಶಾಭಿಮಾನಿಗಳು. ಪರಕೀಯರೂ ಪರಧರ್ಮೀಯರೂ ಆದ ಮುಸಲ್ಮಾನರ ದಬ್ಬಾಳಿಕೆಯ ವಿರುದ್ಧ ಮರಾಠಾ ವೀರರು ಹೋರಾಡಿ ಸನಾತನ ಹಿಂದೂ ಧರ್ಮದ ರಕ್ಷಣೆಗೆ ಹೇಗೆ ಕಂಕಣಬದ್ಧರಾದರೆಂಬುದನ್ನು ಆಪಟೆಯವರು ಅತ್ಯಂತ ರಸವತ್ತಾಗಿ ನಿರೂಪಿಸಿದರು. ಅಂತಹ ಉಜ್ವಲ ಕಾದಂಬರಿಗಳನ್ನು ಆ ಕಾಲಕ್ಕೆ ಮೆಚ್ಚದೆ ಇದ್ದವರು ವಿರಳ. ಗಳಗನಾಥರೂ ಕೂಡ ಅವುಗಳನ್ನು ಮೆಚ್ಚಿದರು. ಅಷ್ಟೇ ಅಲ್ಲ, ಕನ್ನಡಿಗರಿಗೆ ಕನ್ನಡದ ಮುಖಾಂತರವೇ ಈ ಕಾದಂಬರಿಗಳು ದೊರೆಯಲೆಂಬ ಹಾರೈಕೆಯಿಂದ ಅವುಗಳನ್ನು ರೂಪಾಂತರ ಮಾಡಿ ಪ್ರಕಟಿಸಿದರು. ಅವರ ಹಲವು ಕಾದಂಬರಿಗಳು ಮೊದಲು "ಸದ್ಬೋಧ ಚಂದ್ರಿಕೆ", ಮತ್ತು "ಸದ್ಗುರು"

ಎಂಬ ಮಾಸ ಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಪ್ರಕಟ ವಾದುವು. ನಂತರ ಪುಸ್ತಕ ರೂಪದಲ್ಲಿ ಬಂದು, ಇಂದಿಗೆ ಹಲವಾರು ಆವೃತ್ತಿಗಳನ್ನೂ ಕಂಡಿವೆ.

ಗಳಗನಾಥರು ಮರಾಠಾ ಮತ್ತು ರಜಪೂತ ವೀರರ ಕಾದಂಬರಿಗಳನ್ನು ಬರದಂತೆ ಉಳಿದ ಕಾದಂಬರಿಗಳನ್ನೂ ಬರೆ ದಿರುವರು. ಅವುಗಳಲ್ಲಿ ಹಲವು ರೂಪಾಂತರಗಳಾದರೆ, ಕೆಲವು ಸ್ವತಂತ್ರ ಕೃತಿಗಳೂ ಇವೆ. ಅವುಗಳನ್ನು (೧) ಮರಾಠರ ಕಾದಂಬರಿಗಳು (೨) ರಜಪೂತರ ಕಾದಂಬರಿಗಳು (೩) ಕನ್ನಡಿ ಗರ ಕಾದಂಬರಿಗಳು ಮತ್ತು (೪) ಇತರ ಕಾದಂಬರಿಗಳು ಎಂದು ವಿಭಾಗಿಸಬಹುದು.

(i) ಮರಾಠರ ಕಾದಂಬರಿಗಳು

ಗಳಗನಾಥರು ಬರೆದ ಮರಾಠರ ಕಾದಂಬರಿಗಳಲ್ಲಿ ಕಮಲ ಕುಮಾರಿಯು ಮೊದಲನೆಯದಾಗಿದ್ದು ೧೯೧೦ ರಲ್ಲಿಯೇ ಪ್ರಕಟವಾಯಿತು. ನಂತರ ಈಶ್ವರೀ ಸೂತ್ರ, ಶಿವಪ್ರಭುವಿನ ಪುಣ್ಯ, ಮರಾಠರ ಅಭ್ಯುದಯ, ಕುರುಕ್ಷೇತ್ರ, ಛತ್ರಪತಿ. ಗೃಹಕಲಹ ಮತ್ತು ಸ್ವರಾಜ್ಯ ಸುಗಂಧ ಇವು ಬೆಳಕು ಕಂಡವು.

ಕಮಲಕುಮಾರಿ ಎಂಬುದು ಆಪಟೆಯವರ ಸುಪ್ರಸಿದ್ಧ "ಗಡ ಆಲಾ ಪಣ ಸಿಂಹ ಗೇಲಾ" ಎಂಬ ಕಾದಂಬರಿಯ ಭಾಷಾಂತರವಾಗಿದೆ.

ಮೇವಾಡದ ಶೂರ ಸರದಾರನಾದ ವೀರಸಿಂಹನು ಯುದ್ಧದಲ್ಲಿ ಮಡಿದನು. ಆತನ ಹೆಂಡತಿ ಕಮಲ ಕುಮಾರಿಯು ಆತ ಮಡಿದ ಸ್ಥಳದಲ್ಲಿ ಆತನ ಪಾದುಕೆಯೊಂದಿಗೆ ಸತಿಹೋಗಲು ಸಿದ್ಧಳಾದಾಗ, ಔರಂಗಜೇಬನ ಸರದಾರ ಉದಯಭಾನು ತನ್ನ ದಂಡಿನೊಂದಿಗೆ ಬಂದು ಅವಳನ್ನು ಬಂದಿಸಿದನು. ಆತನೂ ಮೊದಲು ರಾಜಪೂತನೇ ಆಗಿದ್ದರೂ ಈಗ ಮುಸಲ್ಮಾನನಾಗಿ ಔರಂಗಜೇಬನ ಸೇವೆಯಲ್ಲಿದ್ದನು. ಆತ ಕಮಲ ಕುಮಾರಿಯನ್ನು ನಿಕಾ ಮಾಡಿಕೊಳ್ಳಬೇಕೆಂದು ಬಯಸಿದ. ಆದರೆ ಔರಂಗಜೇಬನು ಮೂರು ತಿಂಗಳ ನಂತರ ಅವಳನ್ನು ನಿಕಾ ಮಾಡಿಕೊಳ್ಳಬೇಕೆಂದು ವಿಧಿಸಿ, ಆತನನ್ನು ಕೊಂಡಾಣಾ ಎಂಬ ಕೋಟೆಯ ರಕ್ಷಣೆಗೆ ನಿಯಮಿಸಿದನು.

ಕೊಂಡಾಣಾ ಕೋಟೆಯು ಮಹಾರಾಷ್ಟ್ರದಲ್ಲಿದ್ದಿತು. ಅಲ್ಲಿ ಮೊದಲಿದ್ದ ಔರಂಗಜೇಬನ ಸರದಾರನು ಶಿವಾಜಿಗೆ ಅನುಕೂಲನಾಗಿದ್ದನು. ಉದಯಭಾನು ಕೊಂಡಾಣಾ ಕೋಟೆಗೆ ಬಂದ ನಂತರ ಶಿವಾಜಿಯ ಚಿಂತೆ ಹೆಚ್ಚಿತು. ಏನಾದರೂ ಮಾಡಿ ಅವನನ್ನು ತನ್ನ ವಶಕ್ಕೆ ತಂದುಕೊಳ್ಳಬೇಕೆಂದು ಯೋಚಿಸಿದನು. ಅವನ ಬಲಗೈಯಂತಿದ್ದ ಶೂರ ತಾನಾಜಿ ಎಂಬ ಮರಾಠಾ ವೀರನು ಈ ಕಾರ್ಯವನ್ನು ವಹಿಸಿಕೊಂಡನು.

ಈ ಮಧ್ಯೆ ಉದಯಭಾನು ಕಮಲ ಕುಮಾರಿಯನ್ನು ನಿಕಾ ಮಾಡಿಕೊಳ್ಳಬೇಕಾದ ಮೂರು ತಿಂಗಳ ಅವಧಿಯ

ಗಡುವು ಮುಗಿಯುತ್ತ ಬಂದಿತ್ತು. ಕಮಲ ಕುಮಾರಿಯ ಚಿಂತೆ ಹೆಚ್ಚಿತು. ಅವಳ ದಾಸಿ ದೇವಲದೇವಿಯೂ, ದೇವಲ ದೇವಿಯ ಪತಿ ಜಗತ್ಸಿಂಗನೂ ಕಮಲ ಕುಮಾರಿಯನ್ನು ಬಿಡಿಸಲು ಅನೇಕ ತಂತ್ರಗಳನ್ನು ಯೋಚಿಸುತ್ತಿದ್ದರು. ಆದರೆ ಜಗತ್ಸಿಂಗನ ಅಜಾಗ್ರತೆಯಿಂದ ಆತನು ತಾನಾಜಿಯ ಕೈಸೆರೆಯಾದನು. ಅದು ಅವನಿಗೆ ಅನುಕೂಲವೇ ಆಯಿತು. ಆತ ತಾನಾಜಿಗೆ ಕಮಲಕುಮಾರಿಯ ಎಲ್ಲ ವಿಷಯವನ್ನು ತಿಳಿಸಿ ಮಾಘ ವದ್ಯ ನವಮಿಯ ಒಳಗೇ ಅವಳನ್ನು ಬಿಡಿಸಿ ಅವಳ ಪಾತಿವ್ರತ್ಯವನ್ನು ರಕ್ಷಿಸಬೇಕೆಂದು ಪ್ರಾರ್ಥಿಸಿದನು.

ಅವಧಿ ಬಹಳೇ ಕಡಿಮೆಯಾಗಿತ್ತು. ತಾನಾಜಿಗೆ ಹೆಚ್ಚಿನ ಸೈನ್ಯ ಸಹಾಯ ಇನ್ನೂ ಬಂದಿರಲಿಲ್ಲ. ಆದರೆ ದಾರೀ ಕಾಯುತ್ತ ಕುಳಿತುಕೊಳ್ಳದೆ ತಾನಾಜಿಯು ಕಮಲಕುಮಾರಿಯ ರಕ್ಷಣೆಗೆ, ತನ್ನಲ್ಲಿ ಆಗ ಇದ್ದ ಸೈನ್ಯವನ್ನೇ ಅವಲಂಬಿಸಿ ಮರು ದಿನವೇ ಕೋಟೆಯನ್ನು ಆಕ್ರಮಿಸಿದನು. ಕೋಟೆಯು ವಶವಾಯಿತು, ಆದರೆ ದುರ್ದೈವದಿಂದ ತಾನಾಜಿಯು ಕಾಲವಶನಾದ. ನಂತರ ಅಲ್ಲಿಗೆ ಬಂದ ಶಿವಾಜಿಯು "ಕೋಟೆಯು ಬಂದಿತು. ಆದರೆ ಸಿಂಹವು ಹೋಯಿತು!" ಎಂದು ಉದ್ಗಾರ ತೆಗೆದ. ಆ ಕೊಂಡಾಣಾ ಕೋಟೆಗೆ ಶಿವಾಜಿಯು ಸಿಂಹಗಡ ಎಂದು ಹೊಸ ನಾಮಕರಣ ಮಾಡಿ, ಅಲ್ಲಿ ತಾನಾಜಿಯ ಸ್ಮಾರಕವನ್ನು ನಿಲ್ಲಿಸಿದನು. ಕಮಲಕುಮಾರಿಯು ತನ್ನ ಸಂಕಲ್ಪದಂತೆ ಪತಿಯ ಪಾದಕೆಗಳು ಜೊತೆಗೆ ಅಲ್ಲಿಯೇ ಸತಿಹೋದಳು.

ಇದು "ಕಮಲ ಕುಮಾರಿ"ಯ ಕಥೆ. ಆಪಟೆಯವರು ತಾನಾಜಿಯ ವೀರ ಮರಣಕ್ಕೆ ಪ್ರಾಧಾನ್ಯವನ್ನಿತ್ತು ಕಾದಂಬರಿಗೆ "ಕೋಟೆಯು ಬಂದಿತು, ಆದರೆ ಸಿಂಹವು ಹೋಯಿತು" ಎಂದು ಹೆಸರು ಕೊಟ್ಟಿದ್ದರೆ, ಗಳಗನಾಥರು ಕಮಲ ಕುಮಾರಿಯ ಪಾತ್ರಕ್ಕೆ ಪ್ರಾಧಾನ್ಯವನ್ನಿತ್ತು ಕಾದಂಬರಿಗೆ ಆವಳ ಹೆಸರನ್ನೇ ಇಟ್ಟರು. ಆದರೆ ಕಾದಂಬರಿಯ ಹೆಸರಿನ ವಿನಾ ಗಳಗನಾಥರು ಕಾದಂಬರಿಯಲ್ಲಿ ಬೇರೆ ಯಾವ ವ್ಯತ್ಯಾಸವನ್ನೂ ಮಾಡಿಕೊಂಡಿಲ್ಲ.

ಕಾದಂಬರಿಯ ಕಥೆ, ಪಾತ್ರಗಳು, ಸನ್ನಿವೇಶಗಳು— ಎಲ್ಲ ಸುಂದರವಾಗಿ ನಿರೂಪಿತವಾಗಿವೆ. ಪತಿವ್ರತೆಯಾದ ಸಾಧ್ವಿ ಕಮಲ ಕುಮಾರಿ, ವಿಶ್ವಾಸದ ವೀರ ತಾನಾಜಿ, ಧರ್ಮನಿಷ್ಠ ಶಿವಾಜಿ, ಧರ್ಮಲಂಡ ಉದಯಭಾನು ಇವರಲ್ಲದೆ ಸೇಲಾರ ಮಾಮಾ, ಜಗತ್ಸಿಂಗ, ದೇವಲದೇವಿ, ಔರಂಗಜೇಬ ಮೊದಲಾದ ಪೋಷಕ ಪಾತ್ರಗಳೂ ಕೂಡ ತಮ್ಮ ಕಾಲಮೇಲೆ ನಿಲ್ಲುವಷ್ಟು ಶಕ್ತಿಯುತವಾಗಿವೆ. ಕಾದಂಬರಿಯ ಶೈಲಿಯು ಅತ್ಯಂತ ರೋಚಕವಾಗಿದೆ. ಕೆಲವೊಂದು ಸನ್ನಿವೇಶಗಳಂತೂ ಕುತೂಹಲಕರವೂ ರೋಮಾಂಚಕಾರಕವೂ ಆಗಿವೆ. ತಾನಾಜಿಯು ಕೊಂಡಾಣಾ ಕೋಟೆಯನ್ನು ವಶಪಡಿಸಿಕೊಂಡ ವಿಷಯವು ಮರಾಠಿ ಸಾಹಿತ್ಯದಲ್ಲಿ ನಾನಾ ರೂಪದಲ್ಲಿ ಮೂಡಿ ಬಂದು ಬಹು ಜನಪ್ರಿಯವಾಗಿದೆ. ಆಪಟೆಯವರು ಈ ವಸ್ತುವನ್ನು ಕಾದಂಬರಿ ರೂಪದಲ್ಲಿ ಸುಂದರವಾಗಿ ನಿರೂಪಿಸಿರುವರು. ಗಳಗನಾಥರೂ ಅದನ್ನು ಅಷ್ಟೇ ಸಮರ್ಥವಾಗಿ ಭಾಷಾಂತರಿಸಿರುವರು.

ಮುಂದಿನ ಮರಾಠಾ ವೀರರ ಕಾದಂಬರಿಗಳಲ್ಲಿ "ಈಶ್ವರೀ ಸೂತ್ರ"ವು ಗಣ್ಯವಾಗಿದೆ. ಆಪಟೆಯವರ "ಉಷಃಕಾಲ"ವನ್ನೇ ಗಳಗನಾಥರು ಈ ಹೆಸರಿನಿಂದ ರೂಪಾಂತರಿಸಿರುವರು. ಸಾಂಸಾರಿಕ ಕಾರ್ಯಗಳಾಗಲಿ, ಸಾಮಾಜಿಕ ಕಾರ್ಯಗಳಾಗಲಿ, ಬೇರೆ ಯಾವ ಕಾರ್ಯಗಳೇ ಆಗಲಿ ಈಶ್ವರೀ ಸೂತ್ರದಿಂದಲೇ ಆಗುತ್ತವೆಯೆಂಬ ಮಾತಿನ ಅನುಭವವು ಈ ಕಾದಂಬರಿಯಲ್ಲಿ ವ್ಯಕ್ತವಾದ ಕಾರಣ ಗಳಗನಾಥರು ಇದಕ್ಕೆ ಈಶ್ವರೀ ಸೂತ್ರವೆಂದು ಹೆಸರಿಟ್ಟರಂತೆ.

ಈ ಕಾದಂಬರಿಯಲ್ಲಿ ಶಿವಾಜಿಯು ತನ್ನ ಶೂರ ಸ್ನೇಹಿತರ ಸಹಾಯದಿಂದ ಸುಲ್ತಾನಗಡವನ್ನು ವಶಪಡಿಸಿಕೊಂಡ ವಿಷಯವು ನಿರೂಪಿತವಾಗಿದೆ. ಬಹುಸಂಖ್ಯ ಸೈನ್ಯವುಳ್ಳ ಮುಸಲ್ಮಾನ ಸರದಾರರಿಗೆ ಏಸಾಜಿ, ತಾನಾಜಿ, ನಾನಾಸಾಹೇಬ ಮೊದಲಾದ ಶಿವಾಜಿಯ ತರುಣ ಮಿತ್ರರು ಹೇಗೆ ಇಂಗು ತಿನ್ನಿಸಿದರೆಂಬುದು ಇಲ್ಲಿ ಸುಂದರವಾಗಿ ಚಿತ್ರಿತವಾಗಿದೆ. ಅವರ ಶೌರ್ಯ, ಸಾಹಸ ಮತ್ತು ಅವಕ್ಕಿಂತ ಹೆಚ್ಚಾಗಿ ಯುಕ್ತಿ-ತಂತ್ರಗಳೇ ಅವರ ಗೆಲವಿಗೆ ಕಾರಣವಾಗಿವೆ. ಗಳಗನಾಥರ ಪ್ರಕಾರ ಮರಾಠಾ ವೀರರಿಗೆ ದೈವಬಲವೂ ಅನುಕೂಲವಾಗಿತ್ತು. ಗೋಬ್ರಾಹ್ಮಣ ರಕ್ಷಕನಾದ ಶಿವಾಜಿಯ ಧರ್ಮಮಾರ್ಗವೇ ಅದಕ್ಕೆ ಮುಖ್ಯ ಕಾರಣವೆಂದು ಅವರ ದೃಢ ನಂಬುಗೆ.

ಶಿವಾಜಿಯ ತಂದೆ ಶಹಾಜಿಯು ವಿಜಾಪುರ ಬಾದಶಹನ ನೌಕರನಾಗಿದ್ದನು. ಆದರೂ ಶಿವಾಜಿಯು ವಿಜಾಪುರ ಬಾದ-

ಶಹನ ಒಂದೊಂದೇ ಕೋಟೆಯನ್ನು ವಶಪಡಿಸಿಕೊಳ್ಳುತ್ತ ನಡೆದನು. ಇದರಿಂದ ಬಾದಶಹನ ಕೋಪ ಹೆಚ್ಚಾಯಿತು. ಆತನು "ಈ ಪುಂಡ ಶಿವಾಜಿಯನ್ನು ದಂಡಿಸುವವರು ನಮ್ಮ ದರ್ಬಾರಿನಲ್ಲಿ ಯಾರೂ ಇಲ್ಲವೇ? .... ಏನೋ ಒಬ್ಬ ಯಃಕಶ್ಚಿತ ಪೋರನೆಂದು ನಾವು ದುರ್ಲಕ್ಷಿಸುತ್ತ ಬಂದದ್ದು ಈ ನುನೆಗೆ ಬಂದಿತು." ಎಂದು ಗರ್ಜಿಸಿದನು. ಅತ್ಯಂತ ಬಲಿಷ್ಠನೆಂದು ಖ್ಯಾತನಾದ ಅಫಜುಲಖಾನನೆಂಬ ಸರದಾರನು ಶಿವಾಜಿಯನ್ನು ದಂಡಿಸುವೆನೆಂದು ಪ್ರತಿಜ್ಞೆಮಾಡಿ, ಅವನ ಮೇಲೆ ದಂಡೆತ್ತಿ ಹೋದನು. ಆದರೆ ಶಿವಾಜಿಯನ್ನು ಎದುರಿಸುವುದೇ ಕಠಿಣವಿತ್ತು. ಆತನ ಸೈನಿಕರು ಗುಡ್ಡಗಳಲ್ಲಿ ಅಡಗಿಕೊಂಡು ಕುಳಿತು ಖಾನನ ಸೇನೆಯನ್ನು ಬಹುವಾಗಿ ಪೀಡಿಸಿ ಹಣ್ಣು ಮಾಡಿದರು. ಕೊನೆಗೆ ಅಫಜುಲಖಾನನು ಮೋಸದ ದಾರಿಯನ್ನು ಹಿಡಿದನು. ತನಗೆ ಭೆಟ್ಟಿಯಾಗಬೇಕೆಂದು ಶಿವಾಜಿಗೆ ಹೇಳಿ ಕಳಿಸಿ, ಅವನನ್ನು ಸೆರೆ ಹಿಡಿಯಬೇಕೆಂದು ಮಾಡಿದನು. ಇದನ್ನು ಮೊದಲೇ ಊಹಿಸಿದ ಶಿವಾಜಿಯು ಆತನನ್ನೇ ಹುಲಿಯುಗುರುಗಳಿಂದ ಇರಿದು ಕೊಂದು, ಅವನಿಂದ ಲಕ್ಷಾವಧಿ ಆಸ್ತಿಯನ್ನು ವಶಪಡಿಸಿಕೊಂಡನು. ಶಿವಾಜಿಯ ಈ ಗೆಲುವನ್ನು ವರ್ಣಿಸುವ ಕಾದಂಬರಿಯೇ "ಮರಾಠರ ಅಭ್ಯುದಯ"ವು.

ಹೀಗೆ ಶಿವಾಜಿಯು ಅಭ್ಯುದಯವನ್ನು ಹೊಂದುತ್ತ ಕೊನೆಗೆ ಸಿಂಹಗಡವನ್ನು ವಶಪಡಿಸಿಕೊಂಡನು. ಔರಂಗಜೇಬನು ಅದನ್ನು ಸಹಿಸದೆ ರಾಜಾ ಜಯಸಿಂಹ ಎಂಬ ತನ್ನ ಬಲಾಢ್ಯನಾದ ರಜಪೂತ ಸರದಾರನನ್ನು ದೊಡ್ಡ ಸೈನ್ಯದೊಡನೆ

ಶಿವಾಜಿಯ ಮೇಲೆ ಕಳಿಸಿದನು. ಶಿವಾಜಿಯು ಆತನೊಡನೆ ಯುದ್ಧಮಾಡದೆ, ಆತನ ಸೂಚನೆಯಂತೆ ದಿಲ್ಲಿಯ ಬಾದಶಹನ ಭೆಟ್ಟಿಗೆ ಹೋದನು. ಆದರೆ ಬಾದಶಹನು ಶಿವಾಜಿಯನ್ನು ಅತಿಥಿಯಂತೆ ಗೌರವದಿಂದ ಕಾಣದೆ, ಅವನನ್ನು ಬಂಧಿಸಿ ಸೆರೆ-ಮನೆಯಲ್ಲಿಟ್ಟನು. ಶಿವಾಜಿಯೂ ಅದಕ್ಕೆ ಪ್ರತಿಯಾಗಿ ತನ್ನ ಮಗ ಸಂಭಾಜಿಯೊಡನೆ ಯುಕ್ತಿಯಿಂದ ಪಾರಾಗಿ ಬಂದ ಕಥೆಯು "ಛತ್ರಪತಿ" ಯಲ್ಲಿ ಮನಂಬುಗುವಂತೆ ಬಂದಿದೆ.

"ಗೃಹಕಲಹ"ದಲ್ಲಿ ಶಿವಾಜಿಯ ಮರಣದ ಪ್ರಸಂಗವನ್ನು ಕರುಣಾಮಯವಾಗಿ ಬಣ್ಣಿಸಲಾಗಿದೆ. ಗೃಹಕಲಹದಿಂದ ಆಗುವ ದುಷ್ಪರಿಣಾಮಗಳನ್ನು ಲೇಖಕರು ಹೃದಯವೇದ್ಯವಾಗಿ ಬಣ್ಣಿಸಿರುವರು. ಹಿಂದೂಧರ್ಮ ಪರಿಪಾಲನೆಗಾಗಿ ಮರಾಠಾ ಸಾಮ್ರಾಜ್ಯವನ್ನು ಕಟ್ಟಿದ ಶಿವಾಜಿಯು ಮಡಿದರೂ ಅವನ ಪುಣ್ಯವು ಅವನ ಮೊಮ್ಮಕ್ಕಳನ್ನು ರಕ್ಷಿಸಿತು. ಅದೇ "ಶಿವಪ್ರಭುವಿನ ಪುಣ್ಯ". ಸಂಭಾಜಿಯು ಅವಿವೇಕಿಯಾಗಿ ವರ್ತಿಸಿದನು. ಔರಂಗಜೇಬನು ಅವನನ್ನು ಕ್ರೂರವಾಗಿ ಕೊಲ್ಲಿಸಿದನು. ಸಂಭಾಜಿಯ ಹೆಂಡತಿ ಏಸೂಬಾಯಿ ಮತ್ತು ರಾಜಾರಾಮರು ಮರಾಠಾ ವೀರರ ಸಹಾಯದಿಂದ ಮುಸಲ್ಮಾನರನ್ನು ಪ್ರತಿರೋಧಿಸಿದರು. ರಾಜಾರಾಮನು ಕೊನೆಗೆ ಸಾತಾರೆಯಲ್ಲಿ ಮರಾಠಾ ಸಿಂಹಾಸನವನ್ನು ಪುನಃ ಸ್ಥಾಪಿಸಿದನು.

೧೯೩೪ರಲ್ಲಿ ರಚಿತವಾದ "ಸ್ವರಾಜ್ಯ ಸುಗಂಧ" ಎಂಬುದು ಗಳಗನಾಥರು ಬರೆದ ಕೊನೆಯ ಕಾದಂಬರಿಗಳಲ್ಲಿ ಒಂದಾಗಿದೆ.

ಇದು ಅನುವಾದ ಅಥವಾ ರೂಪಾಂತರವಾಗಿರದೆ ಸ್ವತಂತ್ರ ಕೃತಿಯಾಗಿದೆ. ಇವರಲ್ಲಿ ಶಿವಾಜಿಯ ಶೂರ ಸರದಾರರಾದ ನೇತಾಜಿ ಪಾಲಕರ, ಆಬಾಜಿ ಸೋನದೇವ, ಹಾಗು ವೆಂಕಾಜಿ ನಾಥ ಎಂಬವರು ಶೌರ್ಯ-ಸಾಹಸಗಳಿಂದಲೂ ಯುಕ್ತಿ-ಕುಯುಕ್ತಿಗಳಿಂದಲೂ ಮುಸಲ್ಮಾನರ ವಶದಲ್ಲಿದ್ದ ಕಲ್ಯಾಣ ಕೋಟೆಯನ್ನು ವಶಪಡಿಸಿಕೊಂಡ ಕಥೆಯಿದೆ. "ಮುಸಲ್ಮಾನರ ಅಂಜಿಕೆಯಿಂದ ಮರಾಠರು ಮದುವೆಯ ನಿಬ್ಬಣ ಹೊರಡಿಸ ಲಿಕ್ಕೂ ಹೆದರುತ್ತಿದ್ದ" ಕಾಲವದು. ಅಂಥ ಕಾಲದಲ್ಲಿ ಶಿವಾ ಜಿಯು ಒಂದೊಂದೇ ಕೋಟೆಯನ್ನು ಗೆಲ್ಲುತ್ತ ಸ್ವರಾಜ್ಯದ ಸುಗಂಧವನ್ನು ಮಹಾರಾಷ್ಟ್ರದ ತುಂಬೆಲ್ಲ ಹರಡಿದನು.

ಆತನು ಶಿವನೇರಿ ಎಂಬ ಕೋಟೆಯಲ್ಲಿ ತನ್ನ ದರ್ಬಾರು ನೆರೆಯಿಸಿ ಎಲ್ಲರನ್ನೂ ಸತ್ಕರಿಸಿದನು. ಆಬಾಜಿ ಸೋನದೇವನು ಮುಲಾಣಾ ಹಯಾತಿ ಎಂಬ ಮುಸಲ್ಮಾನ ಸರದಾರನ ಸುಂದರ ಸೊಸೆಯನ್ನು ಸೆರೆ ಹಿಡಿದು ಶಿವಾಜಿಗೆ ಕಾಣಿಕೆ ಎಂದು ತಂದಿ ದ್ದನು. ಪರಸ್ತ್ರೀಸೋದರನಾದ ಶಿವಾಜಿಯು ಆತನನ್ನು ತುಂಬಿದ ಸಭೆಯಲ್ಲಿಯೇ ತೆಗಳಿ, ಅವಳಿಗೆ ಸೀರೆ-ಕುಪ್ಪಸಗಳ ಕಾಣಿಕೆ ಕೊಟ್ಟು ಕಳುಹಿದನು.

ಇಲ್ಲಿ ಶಿವನೇರಿ ಕೋಟೆಯ ವರ್ಣನೆ ಮಾಡುವಾಗ ಲೇಖಕರು ಶಿವನೇರಿ ಕೋಟೆ ಎಂಬ ಶಬ್ದಕ್ಕೆ "ಶಿವನ ಏರಿ" ಎಂಬ ವ್ಯುತ್ಪತ್ತಿಯನ್ನು ಹೇಳಿ, "ಶಿವಾಜಿಯ ಆ ಜನ್ಮ ಸ್ಥಳವು ಹಿಂದಕ್ಕೆ ಕರ್ನಾಟಕವಿದ್ದದ್ದರಿಂದ ಶಿವಾಜಿಯು ಕನ್ನಡಿಗ

ನೆಂತಲೇ ಅಭಿಮಾನದಿಂದ ಆರೋಪಿಸಬೇಕಾಗುತ್ತದೆ" ಎಂದು ಬರೆದಿರುವುದು ಗಮನಾರ್ಹವಾಗಿದೆ.

ಈ ಎಲ್ಲ ಕಾದಂಬರಿಗಳಲ್ಲಿ ಶಿವಾಜಿಯು ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಚಿತ್ರಿತನಾಗಿರುವನು. ಆತನ ಹಿಂದೂಧರ್ಮ ಪ್ರೇಮ, ಗೋಬ್ರಾಹ್ಮಣ ಪರಿಪಾಲನೆಯ ಪ್ರತಿಜ್ಞೆ, ನ್ಯಾಯ ನಿಷ್ಠೆ, ಆತನಿಗೆ ದೊರೆತ ಮರಾಠಾ ವೀರರ ಸಹಾಯ, ಅವರ ಯುಕ್ತಿ–ಕುಯುಕ್ತಿಗಳು- ಇವೆಲ್ಲ ಈ ಕಾದಂಬರಿಗಳಲ್ಲಿ ಮತ್ತೆ ಮತ್ತೆ ಬಂದಿರುತ್ತವೆ.

ಗಳಗನಾಥರು ೧೯೧೯ರಲ್ಲಿಯೇ ಬರೆದ "ಕುರುಕ್ಷೇತ್ರ" ಎಂಬ ಕಾದಂಬರಿಯು ಮರಾಠಿ ಲೇಖಕರಾದ ನಾಗೇಶ ವಿನಾಯಕ ಬಾಪಟ ಎಂಬವರ "ಪಾಣಿಪತಚಿ ಮೋಹೀಮು" ಎಂಬುದರ ರೂಪಾಂತರವಾಗಿದೆ. ಅದರಲ್ಲಿ ಪೇಶವೆಯವರ ಕಾಲದ ಪಾನಿಪತ್ತ ಯುದ್ಧದ ಕಥೆಯಿದೆ. ದಿಲ್ಲಿಯನ್ನು ಗೆದ್ದುಕೊಂಡ ಪೇಶವೆ ವೀರರು ಅತಿಯಾದ ಆತ್ಮವಿಶ್ವಾಸದಿಂದ ಪಾನಿಪತ್ತದಲ್ಲಿ ಹೇಗೆ ಸೋತು ಮಣ್ಣುಗೂಡಿದರೆಂಬುದನ್ನು ಈ ಕಾದಂಬರಿಯು ಅತ್ಯಂತ ಹೃದಯವಿದ್ರಾವಕವಾಗಿ ಚಿತ್ರಿಸುತ್ತದೆ. ಈ ಕರುಣ ಕಥೆಯನ್ನು ಬರೆಯುವಾಗ ಸ್ವತಃ ಗಳಗನಾಥರಿಗೆ "ಪರಮಾವಧಿ ದುಃಖ" ವಾಯಿತಂತೆ. ಈ ಕಾದಂಬರಿ ಮಾತ್ರ ತುಂಬ ವಾಚನೀಯವಾಗಿದೆ.

(ii) ರಜಪೂತರ ಕಾದಂಬರಿಗಳು

ಮರಾಠಾ ವೀರರ ಕಥೆಗಳಂತೆ ರಜಪೂತ ವೀರರ ಕಥೆಗಳಲ್ಲೂ ಶೌರ್ಯ-ಸಾಹಸಗಳೇ ವ್ಯೆವೆತ್ತು ನಿಂತಿವೆ. ಇವರ ಕಥೆಗಳಲ್ಲಿ ಪರ್ಯಾಯವಾಗಿ ದಿಲ್ಲಿಯ ಬಾದಶಹರ ಕಥೆಗಳೂ ಹೆಣೆದುಕೊಂಡಿವೆ. ಈ ಮಾಲಿಕೆಯಲ್ಲಿ "ಕ್ಷಾತ್ರ ತೇಜ", "ಸತ್ವಸಾರ", "ತಿಲೋತ್ತಮೆ", ಸಂಸಾರ ಸುಖ". "ಧಾರ್ಮಿಕ ತೇಜ" ಮತ್ತು "ರಾಣಾ ರಾಜಸಿಂಹ" ಇವುಗಳನ್ನು ಹೆಸರಿಸಬಹುದು.

ಈ ಎಲ್ಲ ಕಾದಂಬರಿಗಳಲ್ಲಿ "ಸತ್ತ್ವಸಾರ"ವು ಉತ್ತಮವಾಗಿದೆಯೆಂದು ಸ್ವತಃ ಗಳಗನಾಥರೇ ಅಭಿಪ್ರಾಯಪಟ್ಟಿರುವರು. "ಇದೊಂದು ಸುಂದರವಾದ ಐತಿಹಾಸಿಕ ಕಾದಂಬರಿ" ಎಂದು ಅವರು ಇದನ್ನು ಕರೆದರು. ಈ ಕಾದಂಬರಿಗೆ ಬೇಕಾಗುವ ವಿಷಯವನ್ನು ಅವರು ಬೇರೆ ಬೇರೆ ಮರಾಠಿ ಗ್ರಂಥಗಳಿಂದ ಆಯ್ದುಕೊಂಡರೂ, ಇದೊಂದು ಸ್ವತಂತ್ರ ಕೃತಿಯೆಂದು ಹೇಳಲಿಕ್ಕೆ ಅಡ್ಡಿಯಿಲ್ಲ.

ಮೇವಾಡದ ರಾಣಾ ಪ್ರತಾಪಸಿಂಹನು ಸ್ವಾತಂತ್ರ್ಯ ಮತ್ತು ಸ್ವಧರ್ಮಗಳ ರಕ್ಷಣೆಗಾಗಿ ಅಕಬರ ಬಾದಶಹನ ವಿರುದ್ಧ ಕೊನೆಯ ವರೆಗೂ ಹೋರಾಡಿದನು. ಮರಣ ಬಂದರೂ ವೈರಿಗಳಿಗೆ ಶರಣು ಹೋಗಲಿಲ್ಲ; ರಾಜ್ಯ ಭ್ರಷ್ಟನಾಗಿ ಅಡವಿ ಅಡವಿ ಅಲೆದನು ಮಕ್ಕಳು ಮರಿಗಳಿಗೆ ತಿನ್ನಲಿಕ್ಕೆ ಒಂದು ತುಣುಕು ಒಣ ರೊಟ್ಟಿಯೂ ದೊರೆಯದಂತಹ ಪರಿಸ್ಥಿತಿ ಬಂದಿತು.

ಆದರೂ ಆತನು ತನ್ನ ಅಂತಃ ಸತ್ತ್ವವನ್ನು ಬಿಡಲಿಲ್ಲ. ಆತನಲ್ಲಿಯ ಸತ್ತ್ವವನ್ನೂ ನಿಷ್ಠೆಯನ್ನೂ ಗಳಗನಾಥರು ಬಹುವಾಗಿ ಮೆಚ್ಚಿ ಬರೆದಿರುವರು. ಇದಕ್ಕೆ ವಿರುದ್ಧವಾಗಿ ರಾಜಾ ಮಾನಸಿಂಹನು ರಜಪೂತರ ಕ್ಷಾತ್ರ ಧರ್ಮವನ್ನು ತ್ಯಜಿಸಿ ಅಕಬರನ ಸ್ನೇಹಿತನಾಗಿ, ರಾಣಾ ಪ್ರತಾಪನ ಮೇಲೆ ತಿರುಗಿ ಬಿದ್ದನು. ಅಕಬರನು ಶೂರನೂ ಮುತ್ಸದ್ದಿಯೂ ಇದ್ದಂತೆ ಕಾಮುಕನೂ ಆಗಿದ್ದನು. ಇವರೆಲ್ಲರ ವ್ಯಕ್ತಿತ್ವಗಳು ಕಾದಂಬರಿಯಲ್ಲಿ ಮೂಡಿ ಬಂದಿವೆ. ಕಾದಂಬರಿಯಲ್ಲಿ ಪ್ರತಾಪಸಿಂಹನ ಧರ್ಮನಿಷ್ಠೆ ಮತ್ತು ಕ್ಷಾತ್ರತೇಜಸ್ಸು ಮೊದಲಾದವುಗಳಿಗೆ ಪ್ರಾಧಾನ್ಯ ಹೆಚ್ಚಾಗಿದೆ. ಆದರೆ ಕಾದಂಬರಿಯ ನಿರೂಪಣೆ ಅಷ್ಟೊಂದು ಕಲಾತ್ಮಕವಾಗಿಲ್ಲ, ಶೈಲಿ ರಸವತ್ತಾಗಿಲ್ಲ. ಅದರಿಂದ ಓದುಗರಿಗೆ ಅಲ್ಲಲ್ಲಿ ಬೇಸರ ಬರುತ್ತದೆ.

"ಕ್ಷಾತ್ರತೇಜ" ಎಂಬ ಕಾದಂಬರಿಯಲ್ಲಿ ರಜಪೂತರ ಸ್ವಾಮಿಭಕ್ತಿ ಚಿತ್ರಿತವಾಗಿದೆ. ಸ್ವಾಮಿಭಕ್ತ ದುರ್ಗಾದಾಸ, ಚಂದ್ರಾವತಿ, ರೂಪನಗರದ ರಾಜಕನ್ನೆ ರೂಪಮತಿ, ಉದೇಪುರದ ರಾಜಕುಮಾರ ರಾಜಸಿಂಹ ಮೊದಲಾದವರ ಸುತ್ತಲೂ ಈ ಕಥೆ ಹೆಣೆದುಕೊಂಡಿದೆ. "ಧಾರ್ಮಿಕ ತೇಜ"ವೂ ರಜಪೂತರ ಕ್ಷಾತ್ರ ಧರ್ಮವನ್ನೇ ಕುರಿತಾದುದು. ಮಹತ್ತ್ವಾಕಾಂಕ್ಷಿ ಔರಂಗಜೇಬ, ಕ್ರೂರನಾದ ರಣದುಲ್ಲಾ ಖಾನ, ಮಹೋಬದ ಚಂಪತರಾಯ, ಆತನ ಮಗ ಛತ್ರಸಾಲ ಈ ಪಾತ್ರಗಳು ಕಾದಂಬರಿಯಲ್ಲಿ ಮೂಡಿ ಬಂದಿವೆ. "ತಿಲೋತ್ತಮೆ"ಯಲ್ಲಿ ಇತಿಹಾಸಕ್ಕಿಂತ

ಪ್ರೇಮ ಕಥೆಗೇ ಪ್ರಾಧಾನ್ಯವಿದೆ. ಅಕಬರನ ಬಲಗೈಯಂತಿದ್ದ ಮಾನಸಿಂಹನ ಮಗ ಜಗತ್ಸಿಂಹನು ತಂದೆಯ ಮನದ ವಿರುದ್ಧ ತಿಲೋತ್ತಮೆಯನ್ನು ಕೈಹಿಡಿದ ನಂತರ ಎದುರಿಸಿದ ಕಷ್ಟ ನಷ್ಟ ಗಳು ಇಲ್ಲಿ ರೂಪಿತವಾಗಿವೆ.

ಇವುಗಳಲ್ಲಿ "ಸಂಸಾರ ಸುಖ" ಎಂಬ ಕಾದಂಬರಿಯು ನಿಜವಾಗಿ ಹೆಚ್ಚು ಆಕರ್ಷಕವಾಗಿದೆ. ಇದರಲ್ಲೂ ಮಾನಸಿಂಹನ ಪಾತ್ರ ಬಂದರೂ, ಇದು ಮುಖ್ಯವಾಗಿ ಅಕಬರನ ಸಂಸಾರದ ಕಥೆಯೆಂದು ಹೇಳಲಡ್ಡಿಯಿಲ್ಲ. ಮಾನಸಿಂಹನ ತಂಗಿ ಜೋಧ ಬಾಯಿಯನ್ನು ಅಕಬರನ ಮಗ ಸಲೀಮನಿಗೆ ಕೊಟ್ಟಿತ್ತು. ಅವಳ ಮಗನೇ ಖುಸ್ರು. ಈಗ ಅಕಬರನು ಮುಪ್ಪಿನಿಂದ ಹಾಸಿಗೆ ಹಿಡಿದಿದ್ದನು. ಆತನ ನಂತರ ಪಟ್ಟಕ್ಕೆ ಸಲೀಮನೇ ಬಾಧ್ಯಸ್ಥ ನಾಗಿದ್ದರೂ ಆತ ತನ್ನ ದುರ್ನಡತೆಯಿಂದ ತಂದೆಯ ಅವಕೃಪೆಗೆ ಪಾತ್ರನಾಗಿದ್ದನು. ಮೊಮ್ಮಗ ಖುಸ್ರು ಮಾತ್ರ ಅಕಬರನ ಅಚ್ಚುಮೆಚ್ಚಿನವನಾಗಿದ್ದನು. ಅಕಬರನ ನಂತರ ಆತನನ್ನು ಪಟ್ಟಕ್ಕೆ ತರುವ ಪ್ರಯತ್ನವೂ ನಡೆದಿತ್ತು. ಇದರಲ್ಲಿ ಖುಸ್ರುವಿನ ಮಾವ ಅಜೀಮಖಾನ ಮತ್ತು ಸೋದರಮಾವ ಮಾನಸಿಂಹ ಇವರ ಕೈವಾಡ ಹೆಚ್ಚಾಗಿದ್ದಿತು, ಜೋಧಬಾಯಿಗೆ ಎಲ್ಲಿಲ್ಲದ ಧರ್ಮ ಸಂಕಟ. ಪತಿ–ಪುತ್ರ ಇವರಲ್ಲಿ ಯಾರ ಕೆಡಕನ್ನೂ ಅವಳು ಬಯಸಲಾರಳು. ಅವಳ ಮಾನಸಿಕ ಸಂಕಟದ ಚಿತ್ರ ವನ್ನು ಲೇಖಕರು ಚೆನ್ನಾಗಿ ನಿರೂಪಿಸಿರುವರು.

ಖುಸ್ರು ಕೂಡ ಉದ್ಧತನೇ. ತಂದೆಯಂತೆ ಅವನೂ ಎಲ್ಲ ದುರ್ಗುಣಗಳ ತವರುಮನೆಯಾಗಿದ್ದನು. ಅಕಬರನ ವಿರುದ್ಧ

ಬಂಡೆದ್ದು ಪಟ್ಟವನ್ನು ಆಕ್ರಮಿಸಬಯಸಿದ ಮಗ ಸಲೀಮ- ನಾದರೆ, ಸಲೀಮನನ್ನೇ ಕೊಲೆಗೈದು ಅಕಬರನ ನಂತರ ತಾನೇ ಸಮ್ರಾಟನಾಗಬೇಕೆಂಬ ಮಹತ್ವಾಕಾಂಕ್ಷಿ ಖುಸ್ರು. ಈ ಯಾದವೀ ಕಲಹದಲ್ಲಿ ಕೊನೆಗೆ ಖುಸ್ರುವಿನ ಕಣ್ಣುಗಳನ್ನು ಕೀಳಿಸಿದವ ಸ್ವತಃ ಆತನ ತಂದೆ ಸಲೀಮ. ಮುಂದೆ ನೂರಜ ಹಾನಳು ಆತನ ಕೊಲೆಯನ್ನೇ ಮಾಡಿಸಿದಳು. ಹೀಗೆ ಅರಸನಾಗ ಬಯಸಿದ ಖುಸ್ರುವಿನ ಅಂತ್ಯವು ಕರುಣಾಮಯವಾಗಿದೆ.

ಕಾದಂಬರಿಯಲ್ಲಿ ಅಕಬರ, ಸಲೀಮ, ಖುಸ್ರು, ಜೋಧ ಬಾಯಿ ಮತ್ತು ಮಾನಸಿಂಹರ ಚಿತ್ರಗಳು ಚೆನ್ನಾಗಿ ಮೂಡಿ ಬಂದಿವೆ. ಮಧ್ಯೆ ದುರ್ಜಯಸಿಂಹ ಮತ್ತು ಆತನ ಪ್ರೇಯಸಿ ಯಾದ ಮಂದಾಕಿನಿ ಇವರ ಕಥೆಯೂ ಹೆಣೆದು ಕೊಂಡಿದೆ. ಇವರ ಕಥೆಯೂ ಕರುಣಾಮಯವೇ ಆಗಿದೆ. ಒಟ್ಟಿನಲ್ಲಿ ರಾಜತೃಷ್ಣೆಯು ಮಾನವನನ್ನು ಎಷ್ಟು ಹೀನ ನನ್ನಾಗಿ ಮಾಡಬಲ್ಲುದೆಂಬುದನ್ನು ಈ ಕಾದಂಬರಿಯು ಅತ್ಯಂತ ಸುಂದರವಾಗಿ ಚಿತ್ರಿಸುತ್ತದೆ. ಕಾದಂಬರಿಯ ಹೆಸರು " ಸಂಸಾರ ಸುಖ " ಎಂದಿರುವುದು ಅರ್ಥಪೂರ್ಣವಾಗಿದೆ. ಕಾದಂಬರಿಯ ಕೊನೆಯಲ್ಲಿ ಗಳಗನಾಥರು "ಪ್ರಿಯ ವಾಚಕರೇ, ನೋಡಿರಿ, ರಾಜ ಸಂಸಾರದ ಸುಖವು ಹೇಗಿರುತ್ತದೆ ! ರಾಜ ಸಂಸಾರದಲ್ಲಿ ಇಂಥ ಕಲಹ-ಕೊಲೆಗಳು, ಮರೆ-ಮೋಸಗಳು ದೊಡ್ಡ ಪ್ರಮಾಣದಿಂದ ಕಂಡು ಬಂದರೆ ನಮ್ಮ ಬಡವರ ಸಂಸಾರದಲ್ಲಿ ಅವು ಸಣ್ಣ ಪ್ರಮಾಣದಲ್ಲಿ ಕಂಡು ಬರುತ್ತವೆ. ಆದ್ದರಿಂದ....ಧರ್ಮಕ್ಕೂ, ಪಾಪ ಪುಣ್ಯಗಳಿಗೂ, ದೇವರಿಗೂ,

ಲೋಕಕ್ಕೂ, ಬಹಳವೇಕೆ ತನ್ನ ನೆರಳಿಗೂ ಅಂಜಿ ತಾನು ಸಂಸಾರ ಮಾಡಬೇಕು." ಎಂದು ನಮಗೆ ಬೋಧಿಸಿರುವರು. ಉಳಿದ ಕಾದಂಬರಿಗಳಂತೆ ಈ ಕಾದಂಬರಿಯಲ್ಲೂ ಗಳಗನಾಥರು ಇಂಥ ಬೋಧನೆಯ ಮಾತುಗಳನ್ನು ಕಾದಂಬರಿಯ ಉದ್ದಕ್ಕೂ ಆಗಾಗ ಹೇಳುತ್ತಲೇ ಇರುವರು.

ಹೀಗೆ ಕಾದಂಬರೀ ರೂಪದಿಂದ ನೀತಿ ಬೋಧನೆ ಮಾಡುವುದೇ ಅವರ ಮುಖ್ಯ ಉದ್ದೇಶವಾಗಿತ್ತು. "ಸಂಸಾರ ಸುಖ"ದ ಮುನ್ನುಡಿಯಲ್ಲಿ ಅವರು "ಈ ಕಾದಂಬರಿಯು ಬಂಗಾಲದ ಪ್ರಸಿದ್ಧ ಕಾದಂಬರಿಕಾರರಾದ ಶ್ರೀಯುತ ಬಾಬುಹರಿ ಸಧನ ಮುಖರ್ಜಿ ಇವರ – ಖುಸರು – ಎಂಬ ಉತ್ಕೃಷ್ಟ ಕಾದಂಬರಿಯ ಭಾಷಾಂತರದ ಆಧಾರದಿಂದ ಬರೆದದ್ದಾಗಿದ್ದರೂ ಅಲ್ಲಲ್ಲಿ ಮಾಡಿರುವ ನೀತಿ ಬೋಧವನ್ನು ವಾಚಕರ ಸಲುವಾಗಿ ಹೊಸದಾಗಿ ಸೇರಿಸಿರುತ್ತದೆ," ಎಂದು ಹೇಳಿಯೇ ಇರುವರು. ಈ ರೀತಿ ಅವರು ಬಹುಶಃ ಎಲ್ಲ ರೂಪಾಂತರಗಳಲ್ಲೂ ನೀತಿ ನಿರೂಪಣೆಯ ತಮ್ಮ ಕೈಗಂಟನ್ನು ತಂದಿರುವರು ಮತ್ತು ಆ ಬಗ್ಗೆ ಅವರಿಗೆ ಹೆಚ್ಚಿನ ಅಭಿಮಾನವೂ ಇದ್ದಿತು.

(iii) ಕನ್ನಡಿಗರ ಕಾದಂಬರಿಗಳು

ಮರಾಠಾ, ರಜಪೂತ ಮತ್ತು ಮೊಗಲ ಇತಿಹಾಸದ ಪುಟಗಳನ್ನು ಬಳಸಿಕೊಂಡು ಕಾದಂಬರಿಗಳನ್ನು ಬರೆದಂತೆ ಗಳಗನಾಥರಿಗೆ ಕನ್ನಡಿಗರ ಕಥೆಗಳನ್ನು ಬರೆಯುವ ಆಸೆ ಇದ್ದೇ ಇದ್ದಿತು. ಆದರೆ ಅವರಿಗೆ ಕಚ್ಚಾ ಸಾಮಗ್ರಿಯ ಕೊರತೆ

ವಿಶೇಷವಾಗಿದ್ದಿತು. ಆದರೂ ಅವರು ಪ್ರಯತ್ನದಿಂದ ವಿಜಯನಗರ ಇತಿಹಾಸದ ಹಿನ್ನೆಲೆಯಲ್ಲಿ ಒಂದು ರೂಪಾಂತರವನ್ನೂ ಎರಡು ಸ್ವತಂತ್ರವಾದ ಕಾದಂಬರಿಗಳನ್ನೂ ಬರೆದರೆಂಬುದು ಗಮನಾರ್ಹವಾಗಿದೆ. ಅಲ್ಲದೆ ಚಿತ್ರದುರ್ಗದ ಇತಿಹಾಸಕ್ಕೆ ಸಂಬಂಧಿಸಿದ ಒಂದು ಅಪೂರ್ಣ ಕಾದಂಬರಿಯನ್ನೂ ಬರೆದಿರುವರು. ಆದರೆ ಕದಂಬ, ಚಾಲುಕ್ಯ, ಹೊಯ್ಸಳರನ್ನೂ ಕುರಿತು ಕಾದಂಬರಿಗಳನ್ನು ಬರೆಯಬೇಕೆಂಬ ಅವರ ಸಂಕಲ್ಪ ಪೂರ್ಣವಾಗಲೇ ಇಲ್ಲ.

೧೯೧೩ ರಲ್ಲಿ ಪ್ರಕಟವಾದ 'ಕುಮುದಿನಿ' ಯು ಗಳಗನಾಥರ ಪ್ರಥಮ ಸ್ವತಂತ್ರ ಐತಿಹಾಸಿಕ ಕಾದಂಬರಿ. ವಿಜಯನಗರ ಸಾಮ್ರಾಜ್ಯವು ಹಾಳಾದ ನಂತರ ಚಂದ್ರಗಿರಿಯಲ್ಲಿ ರಾಜ್ಯವಾಳುತ್ತಿದ್ದ ಅರಸು ಮನೆತನದವರಲ್ಲಿ ಪಟ್ಟಕ್ಕಾಗಿ ನಡೆದ ವಿಪ್ಲವದ ಕಥೆಯೇ ಇದು. ಆನೆಯಂಥ ದೊಡ್ಡ ವಿಜಯನಗರ ಸಾಮ್ರಾಜ್ಯವನ್ನೇ ಕಳೆದುಕೊಂಡು ಬಾಲದಂಥ ಚಿಕ್ಕ ರಾಜ್ಯಕ್ಕಾಗಿ ಅವರು ಬಡಿದಾಡಿದರು. ಅದಕ್ಕೇ ಗಳಗನಾಥರು ಈ ಕಾದಂಬರಿಗೆ "ಬಾಲಕ್ಕೆ ಬಡಿದಾಟ" ಎಂಬ ಪರ್ಯಾಯ ನಾಮಕರಣವನ್ನೂ ಮಾಡಿರುವರು.

ನಿಜವಾಗಿ ನೋಡಿದರೆ ಈ ಕಾದಂಬರಿಗೆ ಎಚ್ಚಮನಾಯಕನೇ ನಾಯಕನು. ವಿಜಯನಗರದ ನಿಷ್ಠ ಸರದಾರನಾದ ಎಚ್ಚಮನು ಚಂದ್ರಗಿರಿಯ ನಿಜವಾದ ರಾಜನಿಗೆ ಪಟ್ಟಕಟ್ಟಿ, ವೈರಿಗಳನ್ನು ಎದುರಿಸಿ ಸೋಲಿಸಿದುದೇ ಇಲ್ಲಿಯ ಕಥಾವಸ್ತು. ಆದರೆ ಕಾದಂಬರಿಗೆ ಹೆಚ್ಚಿನ ಆಕರ್ಷಣೆಯನ್ನುಂಟು ಮಾಡಲು

ಕುಮುದಿನಿ ಎಂಬ ನಾಯಕಿಯನ್ನು ಗಳಗನಾಥರು ಸೃಷ್ಟಿಸಿದರು. ಅವಳು ಎಚ್ಚಮನನ್ನು ವರಿಸಿದ ತರುಣಿ. ತನ್ನ ಪತಿಯ ಕಾರ್ಯವು ಕೈಗೂಡುವ ವರೆಗೆ ತಾನು ಬ್ರಹ್ಮಚರ್ಯವನ್ನೇ ಪಾಲಿಸುವ ಪ್ರತಿಜ್ಞೆಗೈದ ಕುಮುದಿನಿಯು ಪತಿಯ ರಾಜಕಾರ್ಯದಲ್ಲೂ ಹಲವಾರು ವಿಧವಾಗಿ ನೆರವಾದಳು.

ಕಾದಂಬರಿಯಲ್ಲಿ ವೀರ, ಕರುಣ ಮತ್ತು ಶೃಂಗಾರ ಭಾವಗಳಿಗೆ ಹೆಚ್ಚಿನ ಆಸ್ಪದವಿದೆ. ಜಗರಾಯನು ಅರಸನನ್ನೂ ಆತನ ಪರಿವಾರದವರನ್ನೂ ಕೊಲ್ಲಿಸುವ ಕ್ರೂರ ಸನ್ನಿವೇಶವು ವಾಚಕರ ಮೇಲೆ ಹೆಚ್ಚಿನ ಪರಿಣಾಮವನ್ನುಂಟುಮಾಡುವಂತಿದೆ.

ಒಟ್ಟಿನಲ್ಲಿ ಕನ್ನಡ ನಾಡಿನ ಮೊದಲನೆಯ ಐತಿಹಾಸಿಕ ಸ್ವತಂತ್ರ ಕಾದಂಬರಿಯನ್ನು ಬರೆದ ಶ್ರೇಯಸ್ಸು ಗಳಗನಾಥರದು.

ಗಳಗನಾಥರ ಕನ್ನಡಿಗರ ಕಾದಂಬರಿಗಳಲ್ಲಿ "ಕನ್ನಡಿಗರ ಕರ್ಮಕಥೆ" ಅತ್ಯಂತ ಶ್ರೇಷ್ಠವಾದುದು. ಇದು ಅವರ ಸ್ವತಂತ್ರ ಕೃತಿಯಾಗಿರದೆ ಆಪಟೆಯವರು ಮರಾಠಿಯಲ್ಲಿ ಬರೆದ "ವಜ್ರಾಘಾತ" ಎಂಬುದರ ರೂಪಾಂತರವಾಗಿದೆ. ಹೆಸರಿಗೆ ತಕ್ಕಂತೆ "ಕನ್ನಡಿಗರ ಕರ್ಮಕಥೆಯು" ವಿಜಯನಗರ ರಾಜ್ಯವು ರಾಮರಾಯನ ಕಾಲಕ್ಕೆ ನಾಶವಾದ ದುರಂತವನ್ನು ಚಿತ್ರಿಸುತ್ತದೆ. ಈ ಐತಿಹಾಸಿಕ ಕಥೆಯು ಹಿನ್ನೆಲೆಯಲ್ಲಿ ರಾಮರಾಯನ ಪ್ರೇಯಸಿ ಮೋಹರಂಜಾನ, ಮತ್ತು ಅವಳ

ಮಗ ರಣದುಲ್ಲಾಖಾನ ಇವರ ಕಾಲ್ಪನಿಕ ಕಥೆಯನ್ನು ಹೆಣೆದಿರುವರು. ಇವರ ಕರುಣ ಕಥೆ ಕರುಳು ಮಿಡಿಯುವಂತಹದು. ತರುಣ ರಾಮರಾಯನ ಒಂದು ತಪ್ಪು ಇಡೀ ಸಾಮ್ರಾಜ್ಯ ನಾಶಕ್ಕೆ ಹೇಗೆ ಕಾರಣವಾಯಿತೆಂಬುದನ್ನು ಲೇಖಕರು ಅತ್ಯಂತ ಕಲಾತ್ಮಕವಾಗಿ ನಿರೂಪಿಸಿರುವರು. ರಾಮರಾಯ-ಮೋಹಜರ್ಾನರ ಪ್ರಣಯ ಸನ್ನಿವೇಶ, ರಣಮಸ್ತಖಾನನು ರಾಮರಾಯನ (ತಂದೆಯೆಂದು ಅರಿಯದೆ) ಚಂಡಿಕೆಯನ್ನು ಹಿಡಿದು ಕೊರಳನ್ನು ಕೊಯ್ಯುವ ಪ್ರಸಂಗ, ಕೊನೆಯಲ್ಲಿ ತಾಯಿ ಮಗ ಇಬ್ಬರೂ ಪುಷ್ಕರಿಣಿಯಲ್ಲಿ ಹಾರಿಕೊಂಡು ಪ್ರಾಣ ಬಿಡುವ ಸನ್ನಿವೇಶ, ಮುಸಲ್ಮಾನರು ವಿಜಯೋನ್ಮಾದದಲ್ಲಿ ವಿಜಯನಗರವನ್ನು ಹಾಳುಗೆಡವಿದ ಚಿತ್ರ—ಇವೆಲ್ಲ ಕಾದಂಬರಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ.

ಕಂಕಾಲ ರೂಪದ ಐತಿಹಾಸಿಕ ಘಟನೆಗಳ ಹಿನ್ನೆಲೆಯಲ್ಲಿ ಲೇಖಕನು ತನ್ನ ಪ್ರತಿಭಾಪೂರ್ಣ ಕಲ್ಪಕತೆಯಿಂದ ಹೇಗೆ ಒಂದು ಸುಂದರವಾದ ರಸಪೂರ್ಣ ಐತಿಹಾಸಿಕ ಕಾದಂಬರಿಯನ್ನು ಬರೆಯಬಲ್ಲ ಎಂಬುದಕ್ಕೆ ಈ "ಕನ್ನಡಿಗರ ಕರ್ಮಕಥೆ" ಒಂದು ಸುಂದರವಾದ ನಿದರ್ಶನವಾಗಿದೆ.

ಗಳಗನಾಥರ ಸ್ವತಂತ್ರ ಮೇರುಕೃತಿಯೆಂದರೆ ಅವರ "ಮಾಧವ ಕರುಣಾವಿಲಾಸ"ವು. ೨೨೦ಪುಟಗಳ ಈ ಬೃಹತ್ ಕೃತಿಯನ್ನು "ಪ್ರಚಂಡ ಸುರಸ ತಾತ್ವಿಕ ಐತಿಹಾಸಿಕ ಕಾದಂಬರಿ" ಎಂದು ಲೇಖಕರು ಕರೆದಿರುವರು. ಹುಕ್ಕ-ಬುಕ್ಕರು ಮಾಧವಾ

ಚಾರ್ಯರ ಪ್ರೇರಣೆಯಿಂದ ಕನ್ನಡ ಸಾಮ್ರಾಜ್ಯವನ್ನು ಹೇಗೆ ಕಟ್ಟಿದರೆಂಬುದನ್ನು ಈ ಕಾದಂಬರಿಯು ನಿರೂಪಿಸುತ್ತದೆ. ಈ ಕಾದಂಬರಿಯಲ್ಲಿ ಆಪಟೆಯವರ ಮರಾಠಾ ವೀರರ ಕಾದಂಬರಿಗಳ ಪ್ರಭಾವ ಸಾಕಷ್ಟು ಮೂಡಿದೆ. ಈ ಕಾದಂಬರಿಯು ಐತಿಹಾಸಿಕವೂ ಆಗಿರಬೇಕು, ತಾತ್ತ್ವಿಕವೂಆಗಿರಬೇಕು ಮತ್ತು ಸರಸವೂ ಆಗಿರಬೇಕು ಎನ್ನುವದು ಗಳಗನಾಥರ ಆಶಯ. ಆದರೆ ಈ ಮೂರನ್ನೂ ಒಂದರಲ್ಲೇ ಎರಕ ಹೊಯ್ದು ಕಲಾತ್ಮಕ ಕಾದಂಬರಿಯನ್ನಾಗಿ ನಿರ್ಮಿಸುವಲ್ಲಿ ಗಳಗನಾಥರು ಅಷ್ಟಾಗಿ ಸಫಲರಾಗಿಲ್ಲವೆಂದೇ ಹೇಳಬೇಕಾಗುತ್ತದೆ. ಕಾದಂಬರಿಯಲ್ಲಿ ಮುಖ್ಯವಾಗಿ ತಾತ್ವಿಕ ವಿಚಾರ ಅತಿಯಾಗಿದೆ. ಅದರಿಂದ ಪಾತ್ರ ಪೋಷಣೆ ಹಿಂದೆ ಬಿದ್ದಿದೆ. ಮುಖ್ಯ ಪಾತ್ರವಾದ ಮಾಧವಾ ಚಾರ್ಯರ ಉನ್ನತ ವ್ಯಕ್ತಿತ್ವವೇ ಚೆನ್ನಾಗಿ ಪ್ರಭಾವಕಾರಿಯಾಗಿ ಮೂಡಿ ಬಂದಿಲ್ಲ.

ಆದರೂ ಹೆಗ್ಗ, ಮಹಮ್ಮದ ತಘಲಕ, ಬಹಾವುದ್ದೀನ, ಕಾಶೀಮ, ಚಿನ್ನಮ್ಮ ಮೊದಲಾದ ಪಾತ್ರಗಳು ಒಡೆದು ಕಾಣುತ್ತವೆ. ಮಲ್ಲ-ಮಲ್ಲಿಕರ ಮಲ್ಲಯುದ್ಧದಂಥ ಕೆಲವು ಸನ್ನಿವೇಶಗಳನ್ನು ಲೇಖಕರು ನಮ್ಮಿಂದ ಉಸಿರು ಬಿಗಿ ಹಿಡಿದೇ ಓದಿಸುತ್ತಾರೆ.

ಗಳಗನಾಥರ ಕೊನೆಯ ಕೃತಿ ಅವರು ೧೯೩೭ರಲ್ಲಿ ಬರೆದ"ದುರ್ಗದ ಬಿಚ್ಚುಗತ್ತಿ" ಎಂಬುದು. ಇದು ಚಿತ್ರದುರ್ಗದ ಇತಿಹಾಸದ ಹಿನ್ನೆಲೆಯಲ್ಲಿ ಬರೆದುದು. ಈ ಕಾದಂಬರಿಯು ಕೇವಲ

ಮೊದಲನೆಯ ಭಾಗ ಮಾತ್ರ ಅಚ್ಚಾಗಿದೆ. ಈಗಿರುವಂತೆ ಕಥೆ ಅಪೂರ್ಣವಾಗಿದೆ.

(iv) ಇತರ ಕಾದಂಬರಿಗಳು

ಈ ವಿಭಾಗದಲ್ಲಿ 'ಪ್ರಬುದ್ಧ ಪದ್ಮನಯನೆ', 'ವೈಭವ,' 'ಧರ್ಮ ರಹಸ್ಯ' 'ರಾಣಿಮೃಣಾಲಿನಿ' ಮತ್ತು 'ಭಗವತಿ ಕಾತ್ಯಾಯನಿ' ಇವುಗಳನ್ನು ಸೇರಿಸಬಹುದು.

'ಪ್ರಬುದ್ಧ ಪದ್ಮನಯನೆ' ಯು ಗಳಗನಾಥರ ಪ್ರಪ್ರಥಮ ಕಾದಂಬರಿಯು. ೧೮೯೮ ರಲ್ಲಿಯೇ ಪ್ರಕಟವಾದ ಈ ಕೃತಿಯು ಧಾರವಾಡದ ವಿದ್ಯಾವರ್ಧಕ ಸಂಘದವರ ಸಾಹಿತ್ಯ ಸ್ಪರ್ಧೆಯಲ್ಲಿ ಪ್ರಥಮ ಪುರಸ್ಕಾರವನ್ನು ಪಡೆಯಿತು.

ಇದು ಗಳಗನಾಥರ ಪ್ರಥಮ ಕಾದಂಬರಿಯಾದಂತೆ, ಅವರ ಉಳಿದ ಕಾದಂಬರಿಗಳಿಂದ ಭಿನ್ನವೂ ಆಗಿದೆ. ಇದು ಐತಿಹಾಸಿಕ ಕಾದಂಬರಿಯಲ್ಲ, ಸಾಮಾಜಿಕವೂ ಅಲ್ಲ. ಇದನ್ನು ಚಿತ್ರಕ ಸಾಹಿತ್ಯದಲ್ಲಿ (Fantacy) ಸೇರಿಸಬಹುದು. ಇದೊಂದು ಅದ್ಭುತರಮ್ಯ ಕಾದಂಬರಿಯಾಗಿದೆ. ಈ ಕಾದಂಬರಿಯಲ್ಲಿ ಮನುಷ್ಯರಂತೆ ದಿವ್ಯ ಋಷಿಗಳೂ, ಮಾಯಾರೂಪ ಧರಿಸಬಲ್ಲ ರಾಕ್ಷಸರೂ ಇದ್ದಾರೆ.

ಕಾದಂಬರಿಯ ನಾಯಿಕೆ ಪದ್ಮನಯನೆ. ಕಪಿಂಜಲ ಋಷಿಯ ಅನುಗ್ರಹದಿಂದ ಜನಿಸಿದ ಇವಳು ಪ್ರಾರಬ್ಧ ಕರ್ಮ

ದಿಂದ ತಂದೆ ತಾಯಿಗಳನ್ನು ಅಗಲಿ ಅನೇಕಾನೇಕ ಕಷ್ಟಗಳನ್ನು ಅನುಭವಿಸುವಳು. ಕೊನೆಗೆ ತನ್ನ ಪ್ರಿಯ ತಮ್ಮನನ್ನೂ ತಂದೆ ತಾಯಿಗಳನ್ನೂ ಸೇರಿ ಸುಖಿಯಾಗುವಳು. ಘಟನಾ ಪ್ರಧಾನ ವಾದ ಈ ಕಾದಂಬರಿಯನ್ನು ಓದುತ್ತ ಹೋದಂತೆ ಬಾಣ ಕಾದಂಬರೀ ಕಥೆಯ ನೆನಪಾಗುವಂತಿದೆ. ಅದಕ್ಕೆ ಕಾರಣ ಕಥಾ ರಚನೆಯಲ್ಲಿರುವ ಅದ್ಭುತರಮ್ಯವಾದ ಕಲ್ಪಕತೆ. "ಪ್ರಬುದ್ಧ ಪದ್ಮನಯನೆ" ಯನ್ನು ಶ್ರೇಷ್ಠ ಕಾದಂಬರಿಯೆಂದು ಯಾರೂ ಹೇಳಲಾರರು. ಆದರೂ ಕನ್ನಡ ಕಾದಂಬರೀ ಸಾಹಿತ್ಯದ ಇತಿಹಾಸದಲ್ಲಿ ಅದೊಂದು ಮೈಲುಗಲ್ಲು ಎಂದು ಒಪ್ಪಲೇ-ಬೇಕು.

"ವೈಭವ" ಎಂಬುದು ಆಪಟೆಯವರ "ಚಂದ್ರಗುಪ್ತ" ಎಂಬ ಕಾದಂಬರಿಯನ್ನು ಆಧಾರವಾಗಿಟ್ಟುಕೊಂಡು ಬರೆದುದು. ಸಂಸ್ಕೃತದಲ್ಲಿ ವಿಶಾಖದತ್ತನ "ಮುದ್ರಾರಾಕ್ಷಸ" ವೆಂಬ ಸುಪ್ರಸಿದ್ಧ ನಾಟಕವೂ ಚಾಣಕ್ಯ-ಚಂದ್ರಗುಪ್ತರ ವಿಜಯದ ಕಥೆಗೇ ಸಂಬಂಧಿಸಿದುದು. ಆದರೆ ಆ ಕಥೆಗೂ ಇಲ್ಲಿಯ ಕಥೆಗೂ ವ್ಯತ್ಯಾಸವಿದೆ.

ಗಾಂಧಾರ ದೇಶವು ಗ್ರೀಕರ ವಶವಾದ ಮೇಲೆ ವಿಷ್ಣುಶರ್ಮ ಎಂಬ ತರುಣ ವಿದ್ವಾಂಸನು ಅಲ್ಲಿಂದ ಹೊರಟು ತಕ್ಷಶಿಲೆಗೆ ಬಂದು ನಂದರ ಆಶ್ರಯವನ್ನು ಯಾಚಿಸಿದನು. ಆದರೆ ಅರಸು ಧನಾನಂದನು ಅವನನ್ನು ಅವಮಾನಗೊಳಿಸಿದನು. ಕುಪಿತನಾದ ವಿಷ್ಣುಶರ್ಮನು ನಂದರ ನಾಶ ಮಾಡುವ ಪ್ರತಿಜ್ಞೆಗೈದನು.

ಈತನೇ ಚಾಣಕ್ಯನು. ೧೫ ವರ್ಷದ ದನ ಕಾಯುವ ಒಬ್ಬ ತೇಜಸ್ವಿ ಬಾಲಕನಿಂದ ಆಕರ್ಷಿತನಾದ ಚಾಣಕ್ಯನು ಆತನ ಇತಿವೃತ್ತವನ್ನು ಅರಿತುಕೊಂಡನು. ಆತನು ಧನಾನಂದನ ಒಬ್ಬ ಪತ್ನಿಯಾದ ಮುರಾದೇವಿಯ ಮಗನು. ಚಾಣಕ್ಯನು ಆ ಬಾಲಕನನ್ನು (ಚಂದ್ರಗುಪ್ತನನ್ನು) ಮುಂದೆ ಮಾಡಿಕೊಂಡು ಮುರಾದೇವಿಯ ಸಹಾಯವನ್ನೂ ಪಡೆದು ನಂದರ ನಿರ್ಮೂಲ ಮಾಡಿ, ಚಂದ್ರಗುಪ್ತನನ್ನು ಪಟ್ಟಕ್ಕೆ ಕೂಡ್ರಿಸಿ, ತನ್ನ ಪ್ರತಿಜ್ಞೆಯನ್ನು ನೆರವೇರಿಸಿದನು. ಅಷ್ಟೇ ಅಲ್ಲದೆ ನಂದರ ನಿಷ್ಠ ಮಂತ್ರಿಯಾಗಿದ್ದ ರಾಕ್ಷಸನನ್ನೂ ಗೆದ್ದು ಆತನನ್ನು ಚಂದ್ರಗುಪ್ತನ ಮಂತ್ರಿ ಪದಕ್ಕೆ ಒಪ್ಪಿಸಿ, ತಾನು ತಪಸ್ಸುಗೈಯಲು ಹಿಮಾಲಯಕ್ಕೆ ತೆರಳಿದನು.

ರಾಕ್ಷಸನಲ್ಲಿ ಸ್ವಾಮಿನಿಷ್ಠೆಯ ವೈಭವ, ಚಾಣಕ್ಯನಲ್ಲಿ ಬುದ್ಧಿಯ ವೈಭವ, ಚಂದ್ರಗುಪ್ತನಲ್ಲಿ ಪ್ರತಾಪದ ವೈಭವ.... ಹೀಗೆ ಒಂದೊಂದು ಪ್ರಮುಖ ಪಾತ್ರದಲ್ಲಿ ಒಂದೊಂದು ವೈಭವ ಕಂಡದ್ದರಿಂದ ಈ ಕಾದಂಬರಿಗೆ ಗಳಗನಾಥರು "ವೈಭವ" ಎಂಬ ಹೆಸರನ್ನೇ ಇಟ್ಟರಂತೆ.

"ಧರ್ಮರಹಸ್ಯ" ಎಂಬುದೂ ಕೂಡ ಅಶೋಕನ ಜೀವನವನ್ನು ಕುರಿತ ಒಂದು ಐತಿಹಾಸಿಕ ಕಾದಂಬರಿಯೇ ಆಗಿದೆ. ಮೊದಲು ಅತ್ಯಂತ ಕ್ರೂರಿಯಾದ ಅಶೋಕನು ತನ್ನ ವಿರೋಧಿಗಳಿಗಾಗಿ ಒಂದು ಶಾಸ್ತ್ರೋಕ್ತ ನರಕವನ್ನೇ ಸೃಷ್ಟಿಸಿದ್ದನು. ಬೌದ್ಧ ಧರ್ಮ ಸ್ವೀಕರಿಸಿದ ನಂತರ, ಅದರಲ್ಲೂ ಕಲಿಂಗ

ಯುದ್ಧದ ನಂತರ ಅವನು ನಿಜವಾದ ಧರ್ಮಪುರುಷನಾದನು. ಅಶೋಕನ ತಮ್ಮ ವೀತಾಶೋಕ, ತಂಗಿ ಇಂದಿರೆ, ಕಲಿಂಗ ರಾಜಕುಮಾರಿ ಪ್ರಣಯಿನಿ ಇವರ ಕಥೆಯೂ ಇಲ್ಲಿ ಸಾಕಷ್ಟು ಅವಕಾಶವನ್ನು ಪಡೆದಿದೆ. ಇಲ್ಲಿ ನಿರೂಪಿತವಾದ ಉಪಗುಪ್ತನ ಕಥೆ ಮಾತ್ರ ತುಂಬ ಹೃದಯಂಗಮವಾಗಿದೆ.

"ಭಗವತಿ ಕಾತ್ಯಾಯನಿ" ಎಂಬುದು ಒಂದು ಪುಟ್ಟ ಪೌರಾಣಿಕ ಕಾದಂಬರಿ. ಇದು ಯಾಜ್ಞವಲ್ಕ್ಯ ಮತ್ತು ಅವರ ಇಬ್ಬರು ಪತ್ನಿಯರಾದ ಕಾತ್ಯಾಯನಿ ಮತ್ತು ಮೈತ್ರೇಯಿಯರ ಕಥೆ. ಕಾದಂಬರಿಯಲ್ಲಿ ಮೊದಲು ಯಾಜ್ಞವಲ್ಕ್ಯ ಮುನಿಗಳ ಮಹಿಮೆಯನ್ನು ವಾಚಕರಿಗೆ ಪರಿಚಯ ಮಾಡಿಕೊಟ್ಟ ನಂತರ, ಅವರ ಮೊದಲ ಧರ್ಮಪತ್ನಿ ಕಾತ್ಯಾಯನಿಯ ವ್ಯಕ್ತಿತ್ವವನ್ನು ಲೇಖಕರು ವಿವರವಾಗಿ ನಿರೂಪಿಸಿರುವರು. ಅವರ ದಾಂಪತ್ಯವು ಅತ್ಯಂತ ಆದರ್ಶವಾದುದು. ಯಾಜ್ಞವಲ್ಕ್ಯರು ಬ್ರಹ್ಮರ್ಷಿಗಳು, ಕಾತ್ಯಾಯನಿಯು ಅವರಿಗೆ ತಕ್ಕ ಸಹಧರ್ಮಿಣಿ. ಪತಿಯ ಬ್ರಹ್ಮಜ್ಞಾನದ ಒಂದಂಶವೂ ಅವಳಲ್ಲಿ ಇಲ್ಲವಾದರೂ, ಪತಿಭಕ್ತಿ ಪರಾಯಣಳಾದ ಅವಳು ಆದರ್ಶ ಗೃಹಿಣಿಯಾಗಿದ್ದಳು. ಅವಳ ಸ್ನೇಹಿತೆಯಾದ ಮೈತ್ರೇಯಿ ಜನಕ ಮಹಾರಾಜನ ಮಹಾಮಂತ್ರಿ ಮಿತ್ರನ ಮಗಳು; ಮಹಾವಿದುಷಿಯಾದ ಗಾರ್ಗಿಯು ಅವಳಿಗೆ ಅಬಚಿಯು (ತಾಯಿಯ ಸಹೋದರಿ). ಈ ಮೈತ್ರೇಯಿಯು ಆಧ್ಯಾತ್ಮದಲ್ಲಿ ತನಗೆ ತಕ್ಕ ಗುರುವೆಂಬ ದೃಷ್ಟಿಯಿಂದ ಯಾಜ್ಞವಲ್ಕ್ಯರ ಪಾಣಿಗ್ರಹಣಮಾಡಲು ಇಚ್ಛಿಸು ತ್ತಿದ್ದಳು. ಇದನ್ನು ಪರ್ಯಾಯವಾಗಿ ಅರಿತ ಕ್ಯಾತಾಯನಿಯು

ತನ್ನ ಪತಿಯು ಮೈತ್ರೇಯಿಯನ್ನು ವರಿಸುವಂತೆ ಅವನನ್ನು ಬಿನ್ನವಿಸಿ ಒಪ್ಪಿಸಿದಳು. ನಂತರ ಕೂಡ ಇಬ್ಬರೂ ಅದೇ ಪ್ರೀತಿಯಿಂದ ಬಾಳಿ, ಕೊನೆಗೆ ಯಾಜ್ಞವಲ್ಕ್ಯರಿಂದ ಆಧ್ಯಾತ್ಮಜ್ಞಾನವನ್ನು ಪಡೆದು ಧನ್ಯರಾದರು.

"ಈ ರಹಸ್ಯಪೂರ್ಣವಾದ ಚಿಕ್ಕ ಕಾದಂಬರಿಯ ಯೋಗ್ಯತೆಯು ಘನತರವಾದದ್ದಿರುವದು" ಎಂದು ಗಳಗನಾಥರು ಇದರ ಬಗೆಗೆ ತುಂಬ ಅಭಿಮಾನವುಳ್ಳವರಾಗಿದ್ದರು. ಪತಿಪತ್ನಿಯರಿಬ್ಬರಿಗೂ ಓದಲಿಕ್ಕೆ ಇದು ಆದರ್ಶ ಕಾದಂಬರಿ ಎಂಬುದು ಅವರ ಅಭಿಪ್ರಾಯ.

ಒಟ್ಟಿನಲ್ಲಿ ಗಳಗನಾಥರ ಈ ಎಲ್ಲ ಕಾದಂಬರಿಗಳೂ ಒಂದೇ ಮಟ್ಟದ ಉನ್ನತ ಪ್ರತಿಭೆಯನ್ನು ಮೆರೆದಿವೆ ಎಂದು ಹೇಳಲಾಗದಿದ್ದರೂ, ಅವುಗಳಲ್ಲಿ ಕೆಲವಾದರೂ ಕನ್ನಡಿಗರ ಮನವನ್ನು ಸೂರೆಗೊಂಡವು. ಜನರು ಅವುಗಳನ್ನು "ಸವಿ, ಬಲು ಸವಿ" ಎಂದು ಮೆಚ್ಚಿ ಕೊಂಡಾಡಿದರು. ತಮ್ಮ ವಾಚಕರ ಮೆಚ್ಚುಗೆಯ, ಪ್ರಸಂಸೆಯ ಮಾತುಗಳನ್ನು ತಮ್ಮ ಕಿವಿಯಿಂದ ಸ್ವತಃ ಕೇಳಿ ಸಂತೋಷ ಪಡುವ ಭಾಗ್ಯವನ್ನು ಪಡೆದು ಗಳಗನಾಥರು ಧನ್ಯರಾದರು.

೩. ಕನ್ನಡ ಸಾಹಿತ್ಯದಲ್ಲಿ ಗಳಗನಾಥರ ಸ್ಥಾನ

ಗಳಗನಾಥರ ಜೀವನ ಮತ್ತು ಅವರ ಕಾದಂಬರಿಗಳ ಸ್ಥೂಲ ಪರಿಚಯವನ್ನು ಮಾಡಿಕೊಂಡ ನಂತರ, ಕನ್ನಡ ಸಾಹಿತ್ಯಕ್ಕೆ ಅವರ ಕಾಣಿಕೆಯೇನು, ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವರ ಸ್ಥಾನವೇನು? ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ.

ಈ ಪ್ರಶ್ನೆಗೆ ಉತ್ತರ ಹುಡುಕುವ ಮೊದಲು ನಾವು ಗಳಗನಾಥರು ಬಾಳಿದ ಕಾಲವನ್ನೂ ತುಸು ಅವಲೋಕಿಸಬೇಕು. ೧೯ ನೆಯ ಶತಮಾನದ ಕೊನೆಯ ಭಾಗವೆಂದರೆ ಆಧುನಿಕ ಕನ್ನಡ ಸಾಹಿತ್ಯದ ಅರುಣೋದಯ ಕಾಲವೆಂದು ಹೇಳಬಹುದು. ಆಗಲೇ ಕನ್ನಡದಲ್ಲಿ ಪದ್ಯವು ಹಿಂದೆ ಬಿದ್ದು ಗದ್ಯವು ಮುಂದೆ ಬರತೊಡಗಿತ್ತು. ಹಳೆಗನ್ನಡ ಶೈಲಿಯಲ್ಲಿಯೇ ಬರೆದ ಮುದ್ದಣ ಕೂಡ "ಪದ್ಯಂ ವದ್ಯಂ ಗದ್ಯಂ ಹೃದ್ಯಂ" ಎಂದು ಹೇಳಿದನು. ಹೊಸಗನ್ನಡ ಗದ್ಯವು ಆಗಲೇ ಒಂದು ವ್ಯವಸ್ಥಿತ ರೂಪವನ್ನು ಪಡೆಯತೊಡಗಿತ್ತು. ಹಲವಾರು ಆಂಗ್ಲ ಧಾರ್ಮಿಕ ಗ್ರಂಥಗಳ ಮತ್ತು ಸಾಹಿತ್ಯ ಕೃತಿಗಳ ಕನ್ನಡ ಅನುವಾದಗಳು ಪ್ರಕಟವಾಗಿದ್ದುವು. ಕೆಲವು ಸ್ವತಂತ್ರ ಕೃತಿಗಳೂ ಹಣಿಕೆ ಹಾಕಿದ್ದುವು.

ಹೀಗಿದ್ದರೂ ಉತ್ತರ ಕರ್ನಾಟಕದಲ್ಲಿ ಇನ್ನೂ ಮರಾಠೀ ಪ್ರಭಾವವೇ ಹೆಚ್ಚಾಗಿತ್ತು. ಸುಶಿಕ್ಷಿತ ಜನರು ಇಂಗ್ಲೀಷ ಸಾಹಿತ್ಯವನ್ನೇ ಓದಿ, ಅದನ್ನು ಬಿಟ್ಟರೆ ಏನೂ ಇಲ್ಲ–ಎಂಬ ಮನೋಭಾವನೆಯನ್ನು ತಳೆದಿದ್ದರೆ, ಸಾಮಾನ್ಯರು ಮರಾಠಿಗೇ ಶರಣು ಹೋಗಿದ್ದರು. ಮರಾಠಿ ಭಾಷೆಯಲ್ಲಿ ಆಗ ಟಿಳಕರ "ಕೇಸರಿ" ಮತ್ತು ಆಪಟೆಯವರ "ಕರಮಣೂಕ" ಎಂಬ ಪತ್ರಿಕೆಗಳು ಅತ್ಯಂತ ಜನಪ್ರಿಯವಾಗಿದ್ದುವು. "ಕೇಸರಿ"ಯು ಉಜ್ವಲ ಲೇಖನಗಳಿಂದ ಜನರಲ್ಲಿ ರಾಷ್ಟ್ರಾಭಿಮಾನವನ್ನು ಕೆರಳಿಸಿದರೆ, "ಕರಮಣೂಕ"ವು ರಸವತ್ತಾದ ಕಾದಂಬರಿಗಳ ಮುಖಾಂತರ ಅದೇ ಉದ್ದೇಶವನ್ನೇ ಸಾಧಿಸುತ್ತಿತ್ತು. ಇವೆರಡೂ ಪತ್ರಿಕೆಗಳು ಕನ್ನಡಿಗರಲ್ಲೂ ಅಷ್ಟೇ ಜನಪ್ರಿಯವಾಗಿದ್ದವು. ಗಳಗನಾಥರೂ ಮೊದಲು ಇವುಗಳನ್ನೇ ಓದಿದರು, ಮೆಚ್ಚಿದರು.

ಆದರೆ ಸಾಮಾನ್ಯ ಜನಕ್ಕೆ ಕನ್ನಡದ ಮುಖಾಂತರವೇ ಈ ಪತ್ರಿಕೆಗಳಲ್ಲಿ ದೊರೆಯುವ ವಿಷಯವನ್ನು ನೀಡಬೇಕೆಂಬ ವಿಚಾರವು ಗಳಗನಾಥರಲ್ಲಿ ಮೊಳಕೆಯೊಡೆಯಿತು. ಅದರ ಪರಿಣಾಮವೆಂದರೆ "ಸದ್ಬೋಧ ಚಂದ್ರಿಕೆ"ಯ ಜನನ. (ಕನ್ನಡದಲ್ಲಿ ಸುಮಾರು ಇದೇ ಕಾಲಕ್ಕೆ "ವಾಗ್ಭೂಷಣ" "ಶುಭೋದಯ" ದಂಥ ಕೆಲವು ಪತ್ರಿಕೆಗಳು ಪ್ರಕಟವಾಗುತ್ತಿದ್ದವು.) ಗಳಗನಾಥರ "ಸದ್ಬೋಧ ಚಂದ್ರಿಕೆ"ಯು ಕನ್ನಡ ನಾಡಿನ ಜನರನ್ನೆಲ್ಲ ಆಕರ್ಷಿಸಿತು. ಗಳಗನಾಥರು ಅದರಲ್ಲಿ ತಮ್ಮ ರೂಪಾಂತರ ಹಾಗೂ ಸ್ವತಂತ್ರ ಕಾದಂಬರಿ

ಗಳನ್ನು ಧಾರಾವಾಹಿಯಾಗಿ ಪ್ರಕಟಿಸಿ ಜನರ ಹೃದಯಗಳನ್ನು ಗೆದ್ದುಕೊಂಡರು. ಅದರ ಜೊತೆಗೇ ಅವರು ತಮ್ಮ ಅಮೂಲ್ಯ ವಿಚಾರ ಪ್ರಚೋದಕ ಲೇಖನಗಳನ್ನೂ ಅದರಲ್ಲಿ ಆಗಾಗ ಬರೆಯುತ್ತಲೂ ಇದ್ದರು, ಉಳಿದವರಿಂದಲೂ ಬರೆಯಿತ್ತಿದ್ದರು.

ಮುಖ್ಯವಾಗಿ, ಗಳಗನಾಥರು ಒಂದು ಖಚಿತವಾದ ಉದ್ದೇಶವನ್ನಿಟ್ಟುಕೊಂಡೇ ತಮ್ಮ ಕಾದಂಬರಿಗಳನ್ನು ಬರೆದರು. ೧೮೯೮ ರಲ್ಲಿ ಪ್ರಕಟಿಸಿದ ತಮ್ಮ ಪ್ರಪ್ರಥಮ ಕಾದಂಬರಿ "ಪ್ರಬುದ್ಧ ಪದ್ಮನಯನೆ" ಯ ಪ್ರಸ್ತಾವನಲ್ಲಿಯೇ ಅವರು "ವಾಚನಾಭಿರುಚಿ ಇಲ್ಲದ ಜನರಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸಲಿಕ್ಕೂ, ಉದ್ಯೋಗಾತಿಶಯದಿಂದ ಶ್ರಾಂತರಾದವರಿಗೆ ವಿಶ್ರಾಂತಿಯಲ್ಲಿ ಆನಂದಗೊಳಿಸಲಿಕ್ಕೂ, ಮನೋರಂಜನವಾಗಿ ನೀತಿಬೋಧವಾಗುವುದಕ್ಕೂ ಉತ್ತಮ ಕಾದಂಬರಿಗಳು ಬೇಕೇ ಬೇಕು" ಎಂದು ಹೇಳಿದ್ದರು. ಮುಂದೆ ಅವರು ಈ ಉದ್ದೇಶಕ್ಕಾಗಿಯೇ ಕಾದಂಬರಿಗಳನ್ನು ಬರೆದರೆಂಬುದು ಸ್ಪಷ್ಟವೇ ಇದೆ.

ವಾಚನಾಭಿರುಚಿ, ಮನೋರಂಜನೆ ಮತ್ತು ನೀತಿಬೋಧೆ ಇವು ಅವರ ಉದ್ದೇಶಗಳಾಗಿದ್ದವು. ಅವರ ಕೃತಿಗಳ ಅವಲೋಕನದಿಂದ ಅವರು ತಮ್ಮ ಈ ಮೂರೂ ಉದ್ದೇಶಗಳನ್ನು ಸಾಧಿಸಿದರೆಂಬುದನ್ನು ನಾವು ಕಾಣಬಹುದು. ವಾಚನಾಭಿರುಚಿಯ ಬಗೆಗೆ ಹೇಳಬೇಕಾದರೆ ಅವರ "ಸದ್ಬೋಧ ಚಂದ್ರಿಕೆ" ಯ ಜನಪ್ರಿಯತೆಯೇ ಅದಕ್ಕೆ ನಿದರ್ಶನ. ಆ ಕಾಲಕ್ಕೆ ಏಳು ಸಾವಿರ ಜನ ಚಂದಾದಾರರಿದ್ದರೆಂಬುದು ಸಣ್ಣ ಮಾತಲ್ಲ.

ಪ್ರತಿಯೊಂದು ಮನೆಗೂ ಒಂದೊಂದು ಪತ್ರಿಕೆಯನ್ನು ಕೊಳ್ಳುವ ಕಾಲ ಇಂದಿಗೂ ನಮ್ಮ ನಾಡಿನಲ್ಲಿ ಬಂದಿಲ್ಲ. ಆಗಂತೂ ಒಂದೊಂದು ಹಳ್ಳಿಗೆ ಒಂದೊಂದು ಪತ್ರಿಕೆ ಹೋಗುತ್ತಿತ್ತೋ ಇಲ್ಲವೊ ! ಈ ಮಾತು ಯಾಕೆ ಹೇಳುವುದೆಂದರೆ, "ಸದ್ಬೋಧ ಚಂದ್ರಿಕೆ"ಯ ಏಳುಸಾವಿರ ಪ್ರತಿಗಳು ಮಾರಾಟವಾಗುತ್ತಿದ್ದವಾದರೆ, ಅದನ್ನು ಓದುವವರ ಸಂಖ್ಯೆ ಎಷ್ಟು ಇದ್ದಿರಬಹುದು ಎಂಬುದನ್ನು ಊಹೆಗೇ ಬಿಡುವುದೊಳಿತು.

ಗಳಗನಾಥರು ತಮ್ಮ ಕಾದಂಬರಿಗಳಿಂದ ಕನ್ನಡಿಗರಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸಿದರೆಂದು ಹೇಳುವುದಕ್ಕಿಂತ, ಅವರು ಕನ್ನಡಿಗರಲ್ಲಿ ಓದುವ ಹುಚ್ಚನ್ನೇ ಹಿಡಿಸಿದರೆಂದು ಹೇಳಬೇಕು. ಇಲ್ಲಿ ನಾವು ಗಮನಿಸಬೇಕಾದ ಇನ್ನೊಂದು ಮಾತೆಂದರೆ, ಅವರು ಬೆಳೆಸಿದ ವಾಚನಾಭಿರುಚಿಯು ಅತ್ಯಂತ ಶುಚಿಯಾದ ಅಭಿರುಚಿಯಾಗಿತ್ತು. ಉದ್ರೇಕಗೊಳಿಸುವ ಕೀಳು ಕೃತಿಗಳನ್ನು ಅವರೆಂದೂ ಬರೆಯಲಿಲ್ಲ. ಹಾಗೆ ಮಾಡುವದು ಅವರ ಉದ್ದೇಶಕ್ಕೆ ವಿರುದ್ಧವಾಗಿತ್ತು. ಅವರ ಕಾದಂಬರಿಗಳಲ್ಲಿ ಅಲ್ಲಲ್ಲಿ ಶೃಂಗಾರ ಸನ್ನಿವೇಶಗಳ ವರ್ಣನೆ ಬಂದಿಲ್ಲವೆಂತಲ್ಲ. ಆದರೆ ಅದು ಎಲ್ಲಿಯೂ ಅಶ್ಲೀಲವಾಗುವುದಿಲ್ಲ. ಅವರ ಕಾದಂಬರಿಗಳನ್ನು ಗೃಹಸ್ಥರೂ ಗೃಹಿಣಿಯರೂ ಹಿರಿಕಿರಿಯರೂ ಕೂಡಿಯೇ ಓದಬಹುದಾಗಿತ್ತು—ಎಂಬುದು ಅವರ ಕೃತಿಗಳ ಅರ್ಹತೆಯನ್ನು ಎತ್ತಿ ತೋರಿಸುತ್ತದೆ.

ಅವರ ಕಾದಂಬರಿಗಳು ಮನೋರಂಜಕವಾಗಿದ್ದುವೆಂದು ಹೇಳಿದರೆ ದ್ವಿರುಕ್ತಿ ದೋಷವೇ ಆದೀತು. ಮನೋರಂಜಕ

ವಾಗಿರದಿದ್ದರೆ ಅವನ್ನು ಯಾರು ಓದುತ್ತಿದ್ದರು? ಉಜ್ವಲ ಕಥಾವಸ್ತು, ಉದಾತ್ತ ಕಥಾನಾಯಕರು ಮತ್ತು ಕುತೂಹಲ ಜನಕ ಶೈಲಿ—ಇವೇ ಅವರ ಕಾದಂಬರಿಗಳ ಜನಪ್ರಿಯತೆಯ ಮುಖ್ಯ ಕಾರಣಗಳು. ಉಜ್ವಲ ರಾಷ್ಟ್ರಾಭಿಮಾನವನ್ನೂ, ಹಿಂದೂ ಧರ್ಮ ಪ್ರೇಮವನ್ನೂ ಹುಟ್ಟಿಸುವ ಮರಾಠಾ, ರಜಪೂತ ಮತ್ತು ಕನ್ನಡ ವೀರರ ಕಥೆಗಳನ್ನೇ ಅವರು ಬರೆದರು. ಅವರು ಬರೆದ ಇಪ್ಪತ್ತುಮೂರು ಕಾದಂಬರಿಗಳಲ್ಲಿ ಒಂದೂ ಸಾಮಾಜಿಕ ಕಾದಂಬರಿ ಇಲ್ಲವೆಂಬುದನ್ನು ನಾವು ಗಮನಿಸ ಬೇಕು. ಅದಕ್ಕೆ ಕಾರಣವೆಂದರೆ ಸಾಮಾಜಿಕ ಕಾದಂಬರಿಗಳಲ್ಲಿ ಶಿವಾಜಿ, ಪ್ರತಾಪಸಿಂಹ, ಎಚ್ಚಮನಾಯಕ ಮೊದಲಾದವರಂಥ ಉದಾತ್ತ ವ್ಯಕ್ತಿಗಳು ಎಲ್ಲಿ ಸಿಕ್ಕಬೇಕು?

ಗಳಗನಾಥರು ತಮ್ಮ ಲೇಖನಗಳಲ್ಲಿಯಂತೆ ಕಾದಂಬರಿ ಗಳಲ್ಲೂ ನೀತಿಬೋಧನೆಯನ್ನು ಮಾಡಿದರು. ಕಾದಂಬರಿಯ ಕಥೆಗಿಂತ, ಅಲ್ಲಿಯ ನೀತಿಬೋಧೆಯ ಕಡೆಗೇ ಅವರ ಗಮನ ಹೆಚ್ಚಾಗಿರುತ್ತಿತ್ತು ಎಂದರೆ ತಪ್ಪಾಗಲಾರದು. ಈ ಉದ್ದೇಶ ದಿಂದಲೇ ಅವರು ತಮ್ಮ ಪ್ರತಿಯೊಂದು ಕಾದಂಬರಿಯಲ್ಲೂ ಒಬ್ಬ ಸದ್ಗುರುವನ್ನು ಸೃಷ್ಟಿಸಿಯೇ ಇದ್ದಾರೆ. ಭಾಷಾಂತರಿತ ಕಾದಂಬರಿಗಳಲ್ಲಿ ಕೂಡ ಮೂಲದಲ್ಲಿ ಇಲ್ಲದಿದ್ದರೂ ಅವರು ಅಲ್ಲಲ್ಲಿ ನೀತಿಬೋಧನೆಯ ಮಾತುಗಳನ್ನು ತಂದೇ ತರುತ್ತಾರೆ. ಕೆಲವು ಸಲ ಅದು ಕಾದಂಬರಿಯ ಕಲಾತ್ಮಕತೆಗೆ ಬಾಧೆಯನ್ನೂ ತಂದಿದೆ. ಆದರೆ ಆ ಕಡೆಗೆ ಗಳಗನಾಥರು ಲಕ್ಷಿಸಲಿಲ್ಲ, ಮತ್ತು

ಇದೆಲ್ಲವೂ ಆ ಕಾಲದ ಗಳಗನಾಥರ ವಾಚಕರಿಗೆ ಪ್ರಿಯವಾಗಿತ್ತೆಂದೇ ನಾವು ತಿಳಿಯಬೇಕಾಗುತ್ತದೆ.

ಗಳಗನಾಥರ ಕಾದಂಬರಿಗಳು ಇಂದಿನ ವಾಚಕರಿಗೆ ಅಷ್ಟು ರುಚಿಸದೆ ಇರಬಹುದು, ವಿಮರ್ಶಕರು ಅವುಗಳಲ್ಲಿ ದೋಷಗಳನ್ನು ಕಾಣಬಹುದು. ಆದರೆ ಅವರ ಕಾದಂಬರಿಗಳನ್ನು ನಾವು ಇಂದಿನ ವಿಮರ್ಶೆಯ ಒರೆಗಲ್ಲಿಗೆ ಹಚ್ಚಿ ನೋಡುವುದೇ ಸರಿಯಲ್ಲ. ಗಳಗನಾಥರ ಶೈಲಿಯೇ ಅವರ ಕಾಲಕ್ಕೆ ಹೊಸ ಶೈಲಿಯಾಗಿತ್ತು. ಅನೇಕರು ಅವರನ್ನು ಅನುಕರಿಸಿದರು. ಗಳಗನಾಥರು ಕನ್ನಡದಲ್ಲಿ ವಾಚಕರನ್ನು ನಿರ್ಮಿಸಿದಂತೆ ಲೇಖಕರನ್ನೂ ನಿರ್ಮಿಸಿದರು.

ಇವೆಲ್ಲವುಗಳ ಜೊತೆಗೆ ಗಳಗನಾಥರಿಂದ ಕನ್ನಡ ಸಾಹಿತ್ಯಕ್ಕೆ ಇನ್ನೊಂದು ದೊಡ್ಡ ಉಪಕಾರವಾಗಿದೆ. ಅದೆಂದರೆ ಅವರು ನಿರ್ಮಿಸಿದ ಕನ್ನಡ ಗದ್ಯ ಶೈಲಿ. ಇಂದು ನಾವು ಗಳಗನಾಥರ ಕಾದಂಬರಿ ತಂತ್ರವನ್ನು ಮೆಚ್ಚಲಿ, ಬಿಡಲಿ; ಅವರ ಶೈಲಿಯನ್ನು ಮೆಚ್ಚದೆ ಇರಲು ಸಾಧ್ಯವೇ ಇಲ್ಲ. ಆಗ ಅದೇ ರೂಪುಗೊಳ್ಳುತ್ತಿದ್ದ ಕನ್ನಡ ಗದ್ಯಶೈಲಿಗೆ ಅವರು ಗಟ್ಟಿಮುಟ್ಟಾದ ತಳಪಾಯವನ್ನು ಹಾಕಿ ಭದ್ರಪಡಿಸಿದರು. ಅವರ ಗದ್ಯ ಶೈಲಿ ಸಹಜವಾದುದಾದರೂ ಶಕ್ತಿಯುತವಾಗಿತ್ತು. ಅದರಂತೆ ದಿನಬಳಕೆಯ ಮಾತುಗಳನ್ನೇ ಅವರು ಹೆಚ್ಚಾಗಿ ಬಳಸಿದರೂ ಅವರ ಶೈಲಿ ಗ್ರಾಮ್ಯವಾಗಿರಲಿಲ್ಲ.

ಕನ್ನಡ ನುಡಿಯ ಜೀವಾಳವಾದ ದೇಸಿಯನ್ನೇ ಅವರು ಬೆಳಗಿಸಿದರು. ಇದನ್ನು ಅವರ ಸ್ವತಂತ್ರ ಮತ್ತು ರೂಪಾಂತರಿತ

ಕಾದಂಬರಿಗಳಲ್ಲಿಯಂತೆ, ಅಕ್ಷರಶಃ ಭಾಷಾಂತರ ಮಾಡಿದ ಕೃತಿಗಳಲ್ಲೂ ಕಾಣಬಹುದು. ಅವರು ಬಳಸುವ ಗಾದೆ ಮಾತುಗಳು, ಪಡೆನುಡಿಗಳು ಸಂದರ್ಭಕ್ಕೆ ಅತ್ಯಂತ ಉಚಿತವಾಗಿರುತ್ತಿದ್ದುವು. ಅವರ ಮಾತಿನಲ್ಲಿ ಅವು ಅಪ್ರಯತ್ನಪೂರ್ವಕವಾಗಿ ಬಂದು ಬಿಡುತ್ತಿದ್ದುವು. ಆದರಿಂದಲೇ ಅವರ ಶೈಲಿಗೆ ಸಹಜತೆಯ ಸೊಬಗು ಉಂಟಾಯಿತು. ಉದಾಹರಣೆಗಾಗಿ ಕೆಲವು ಮಾತುಗಳನ್ನು ನೋಡಬಹುದು.

"ಒಣ ಮಾತಿನಿಂದ ಕಾಲಹರಣ ಮಾಡುವಾಗ ಕರ್ತವ್ಯನಿಷ್ಠರಿಗೆಲ್ಲ ಹೀಗೆಯೇ ಚಡಪಡಿಕೆಯಾಗುವುದು."

"ತಂಗೀ, ನಿನ್ನಂಥವರು ಹಾದಿಯಲ್ಲಿ ಬಿದ್ದಿರುವರೇ ? ಮನೆ ಮನೆಗೆ ಒಟ್ಟಿರುವರೇ ?"

"ಅವರು ಒಬ್ಬರನ್ನೊಬ್ಬರು ಕಂಡರೆ ಬಿದ್ದು ಸಾಯುತ್ತಿದ್ದರು."

ಬಲವಿಲ್ಲದಾಗ ನೆಲವೆದ್ದು ಬಡಿಯಿತೆಂಬ ಮಾತು ಸುಳ್ಳಲ್ಲ."

"ನಮ್ಮಂಥ ಅಹಂಕಾರಿಗಳಾದ ಸಂಸಾರಿಗಳಲ್ಲಿ ಇಂಥ ಮಂಡತನವಿದ್ದರೆ ನಡೆಯದು."

"ಕ್ಷುದ್ರ ಮನಸ್ಸಿನಲ್ಲಿ ಹಲಕೆಲವು ಸದ್ಗುಣಗಳಿದ್ದರೂ, ಗೆದ್ದಲಿ ತಿಂದ ಕಟ್ಟಿಗೆಯಂತೆ ಆ ಸದ್ಗುಣಗಳು ಕೆಲಸಕ್ಕೆ ಬಾರವು."

"ಆ ಅಭಿಮಾನದ ಒಗರಿನಿಂದ ಅವನು ಖುಸ್ರುವನ್ನು ತಿರಸ್ಕಾರ ದೃಷ್ಟಿಯಿಂದ ನೋಡುತ್ತಿದ್ದನು."

"ಅಂಗಾಲಿಗೆ ಹೇಸಿಗೆಯಿಲ್ಲ, ಕರುಳಿಗೆ ನಾಚಿಕೆಯಿಲ್ಲೆಂಬ ಮಾತು ಸುಳ್ಳಲ್ಲ."

"ಬಾಳಾ, ಖುಸ್ರು, ಬೇಡಪ್ಪಾ, ಅಳಬೇಡ."

"ಅವ್ವಾ, ನನ್ನ ಎರಡನೆಯ ಅಪರಾಧವೂ ನನ್ನ ಉಲ ಕೋಚಿತನದಿಂದಲೇ ಆಯಿತು."

"ಪಾಮರ ಜೀವಿಗಳು ಸಂಸಾರ ಸುಖವನ್ನು ಎರಡೂ ಕೈಗಳಿಂದ ಉಣ್ಣುವರೆಂಬುದನ್ನು ನೀನೇನು ಬಲ್ಲೆ?

"ಹೊಟ್ಟೆಯಲ್ಲಿಯ ಸಿಟ್ಟು ರಟ್ಟೆಯಲ್ಲಿ ಇರಲಿಲ್ಲ."

"ತಿರುವೇಂಕಟನ ಮೂಗು ಕೊಯ್ದು ಅವನ ಕೈಯಲ್ಲಿ ಕನ್ನಡಿ ಕೊಟ್ಟ ಹಾಗಾಯಿತು."

"ಔರಂಗಜೇಬನ ಮಗ್ಗಲು ಮುರಿಯಬೇಕೆಂದು ಮಾಡಿದ್ದನು."

"ಗಂಡುಭೂಮಿಯಂತೆ ಬುರುಕೆಯಿಲ್ಲದೆ ಬಂದಿದ್ದ ಈಕೆಯು..........."

"ಹೀಗೆ ಸಿಗಲಿಕ್ಕೆ ಈ ಸಾಹಸೀ ಸ್ತ್ರೀಯ ಹೊಯ್ಕಾರಿತನವೇ ಕಾರಣ."

"ಅವನಿಗೆ ಚೆನ್ನಾಗಿ ಮಂಗಳಾರತಿ ಮಾಡಿದಂತಾಯಿತು."

"ತಲೆಯ ಮೇಲೆ ಮೆಣಸು ಅರೆಯುತ್ತಿದ್ದನು."

ಇಂತಹ ಮಾತುಗಳು ಕಾದಂಬರಿಯ ಪುಟಪುಟಗಳಲ್ಲಿ ತುಂಬಿವೆ. ಒಂದು ಗಾದೆಯ ಮಾತೇ ಇರಲಿ, ಪಡೆನುಡಿಯೇ ಇರಲಿ, ಒಂದು ಹೋಲಿಕೆಯೇ ಇರಲಿ, ಸಹಜ ವರ್ಣನೆಯೇ ಇರಲಿ ಗಳಗನಾಥರು ಅದನ್ನು ಅತ್ಯಂತ ಉಚಿತವಾಗಿ ಪ್ರಯೋಗಿಸುತ್ತಾರೆ. ಅದರಿಂದಲೇ ಆ ಮಾತಿಗೆ ಹೆಚ್ಚಿನ ಸೊಗಸು. ಅದಕ್ಕೆಂತಲೇ ಗಳಗನಾಥರನ್ನು ಹೊಸಗನ್ನಡ ಗದ್ಯಶೈಲಿಯ ಆದ್ಯಪ್ರವರ್ತಕರೆಂದು ಕರೆಯಲಾಗಿದೆ.

ಒಟ್ಟಿನಲ್ಲಿ ಗಳಗನಾಥರು ಕನ್ನಡಿಗರಲ್ಲಿ ಕನ್ನಡತನವನ್ನು ಜಾಗೃತಗೊಳಿಸಿದರು, ವಾಚನಾಭಿರುಚಿರುಚಿಯನ್ನು ಹೆಚ್ಚಿಸಿದರು, ಅಷ್ಟೇ ಅಲ್ಲ ಉತ್ತಮ ಅಭಿರುಚಿಯನ್ನು ಹುಟ್ಟಿಸಿದರು. ಅದರ ಜೊತೆಗೇ ಧರ್ಮ ಜಾಗೃತಿಯನ್ನು ಮಾಡಿ, ರಾಷ್ಟ್ರಾಭಿಮಾನದ ಕಿಡಿಯನ್ನು ಪ್ರಜ್ವಲಿಸಿದರು. ಅವರು ಕನ್ನಡ ಗದ್ಯಶೈಲಿಗೆ ಒಂದು ಅಂತಃಸತ್ತ್ವವನ್ನು ತಂದು ಕೊಟ್ಟರು.

ಗಳಗನಾಥರ ಪ್ರಬುದ್ಧ ಪದ್ಮನಯನೆ, ಕಮಲ ಕುಮಾರಿ, ಛತ್ರಪತಿ, ಮೃಣಾಲಿನಿ, ಕುಮುದಿನಿ, ಕನ್ನಡಿಗರ ಕರ್ಮಕಥೆ, ಕುರುಕ್ಷೇತ್ರ, ಗೃಹಕಲಹ, ಸಂಸಾರಸುಖ, ಮಾಧವ ಕರುಣಾವಿಲಾಸ—ಈ ಮೊದಲಾದ ಕೆಲವು ಕಾದಂಬರಿಗಳಾದರೂ ಕನ್ನಡ ವಾಚಕರ ಹೃದಯದಲ್ಲಿ ಆಳವಾಗಿ ಬೇರೂರಿ ನಿಂತಿವೆ. ಕಾದಂಬರಿಗಳ ಕಥೆ ಮರೆತರೂ, ಗಳಗನಾಥರು ಚಿತ್ರಿಸಿದ ಕೆಲವು ಸನ್ನಿವೇಶಗಳು, ಸೃಷ್ಟಿಸಿದ ಕೆಲವು ವ್ಯಕ್ತಿಗಳು ನಮ್ಮ

ಸ್ಮೃತಿಪಟಲದಲ್ಲಿ ಅಚ್ಚಳಿಯದೆ ನಿಲ್ಲುತ್ತವೆ. ಮೇಲಾಗಿ ಗಳಗನಾಥರ ಕೆಚ್ಚಿನ ಕನ್ನಡದ ಮಾತುಗಳು ನಮ್ಮಲ್ಲಿ ಅಚ್ಚೊತ್ತಿದಂತೆ ಬಹುಕಾಲ ಮಾಸದೆ ನಿಲ್ಲುತ್ತವೆ.

ಗಳಗನಾಥರು ಕನ್ನಡ ಕಾದಂಬರಿಯ ಮೇಲೆ ಅಳಿಸಲಾರದ ಪ್ರಭಾವವನ್ನು ಬೀರಿ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡರು. ಅಂದು ಅವರು ತಮ್ಮ ಕಾದಂಬರಿಗಳನ್ನುಬರೆದು ಜನರಲ್ಲಿ ಕಾದಂಬರಿ ಸಾಹಿತ್ಯದ ಬಗ್ಗೆ ಅಷ್ಟೊಂದು ಆಸ್ಥೆಯನ್ನು ಕುದುರಿಸದೆ ಹೋಗಿದ್ದರೆ, ಇಂದು ಕನ್ನಡದಲ್ಲಿ ಕಾದಂಬರಿಯು ಇಷ್ಟೊಂದು ಪ್ರಾಮುಖ್ಯತೆಯನ್ನು ಪಡೆಯುತ್ತಿತೆಂದು ಹೇಳಲಿಕ್ಕಾಗದು.

ಕನ್ನಡ ಕಾದಂಬರಿಯ ಉನ್ನತ ಸೌಧದ ತಳಪಾಯವನ್ನು ಹಾಕಿದವರೇ ಗಳಗನಾಥರು. ಅದಕ್ಕೆಂದೇ ಅವರು ಕನ್ನಡ ಕಾದಂಬರಿಯ ಪಿತಾಮಹರು !

ಉಪನ್ಯಾಸ ಗ್ರಂಥಮಾಲೆ

ಇತ್ತೀಚಿನ ಪ್ರಕಟನೆಗಳು

೧. ವ್ಯಾವಹಾರಿಕ ಮಾನವಶಾಸ್ತ್ರ —ಕೆ. ಜಿ. ಗುರುಮೂರ್ತಿ
೨. ಪ್ರಾಚೀನ ಗ್ರೀಕರ ಅಮರ ಕೊಡುಗೆಗಳು —ಡಿ ಟಿ. ಜೋಶಿ
೩. ಭರ್ತೃಹರಿಯ ನೀತಿಶತಕ —ಡಿ. ಎನ್. ಶಾನಭಾಗ
೪. ಹರ್ಡೇಕರ ಮಂಜಪ್ಪನವರು ಹಾಗೂ ಅವರ ಕೃತಿಗಳು —ಜಿ. ಎಸ್. ಹಾಲಪ್ಪ
೫. ಪೃಥ್ವಿ ಹಾಗೂ ಜೀವಿಗಳ ರೂಪಾಂತರ —ಎಂ ಎಸ್. ಎಸ್. ರಾವ್
೬. ಪ್ರಜಾಪ್ರಭುತ್ವದಲ್ಲಿ ಕಾಯಿದೆಯ ಸ್ಥಾನ —ಸಿ. ಕೆ. ಎನ್. ರಾಜ
೭. ಪೇಟೆ ಮತ್ತು ಜಾಹೀರಾತುಗಳು —ಟಿ. ಎಂ. ಪಂಡಿತ
೮. ಆಯುರ್ವೇದ ಶಾಸ್ತ್ರ —ಧನ್ಯಕುಮಾರ ಇಜಾರಿ
೯. ಮೈಲಾರದೇವರು —ಶ್ರೀನಿವಾಸ ರಿತ್ತಿ
೧೦. ಭಗವದ್ಗೀತೆ —ಎಲ್. ಸಿ. ಪಾಟೀಲ
೧೧. ಭೂಸಂರಕ್ಷಣೆ ಮತ್ತು ಒಣ ಬೇಸಾಯ —ಎಂ. ಎಂ. ಹೊಸಮನಿ
೧೨. ಜನಪದ ಕಾವ್ಯದಲ್ಲಿ ಜೀವನಧರ್ಮ —ಪಿ. ವ್ಹಿ. ಮಲ್ಲಾಪುರ
೧೩. ಆಧುನಿಕ ಕನ್ನಡ-ಹಿಂದೀಕಾವ್ಯ —ಸಿದ್ಧಲಿಂಗ ಪಟ್ಟಣಶೆಟ್ಟಿ

ಪ್ರಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ